**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ಚಿಕ್ಕಮಗಳೂರು**

**ಸತ್ರ ಮೊಕದ್ದಮೆ ಸಂಖ್ಯೆ 95/2024**

| | | |
|---|---|---|
| ಆರೋಪಿಯ ಹೆಸರು | : | ಪೂರ್ಣೇಶ್ ಕುಮಾರ್ |
| ತಂದೆಯ ಹೆಸರು | : | ಲೇಟ್ ಎಸ್.ಪಿ.ರಾಜೇಗೌಡ |
| ವಯಸ್ಸು | : | 47 ವರ್ಷ |
| ಉದ್ಯೋಗ | : | |
| ವಾಸಸ್ಥಳ | : | ರಾಮನಹಳ್ಳಿ, ಗೌರಿ ಚಿತ್ರಮಂದಿರ ಹಿಂಭಾಗ, ಚಿಕ್ಕಮಗಳೂರು. |

**ಕಲಂ 351 ಬಿ.ಎನ್.ಎಸ್.ಎಸ್. ಅಡಿಯಲ್ಲಿ ಆರೋಪಿತನ ಹೇಳಿಕೆ.**

ಪ್ರಶ್ನೆ-1 ಅಭಿಯೋಜನೆಯ ಸಾಕ್ಷಿಗಳ ಸಾಕ್ಷ್ಯ ವಿಚಾರವನ್ನು ಕೇಳಿದ್ದೀರಾ?

ಉತ್ತರಃ ಕೇಳಿದ್ದೇನೆ

ಪ್ರಶ್ನೆ-2 ಫ್ರಾ.ಸಾ.1 ಸುಮಂತ್, ಮೃತ ಕನಕರವರ ಮಗ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀನು ಅವರಿಗೆ ಗೊತ್ತಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-3 ಫ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರ ತಂದೆ ಈಗ್ಗೆ 27 ವರ್ಷಗಳ ಹಿಂದೆ ಮೃತಪಟ್ಟಿದ್ದಾಗಿ, ನಂತರ ಅವರು ಮತ್ತು ಅವರ ತಾಯಿ ಮೂಡಿಗೆರೆ ನಡುವಿನಮಾಕ್ಕಲ್ ನಲ್ಲಿರುವ ಅವರ ಅಜ್ಜ ಅಂದರೆ ಅವರ ತಾಯಿಯ ತಂದೆಯ ಮನೆಯಲ್ಲಿ ವಾಸವಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-4 ಫ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮೊದಲಿಗೆ ಅವರ ತಾಯಿ ಚೆನ್ನಾಗಿದ್ದುದ್ದಾಗಿ, ಆದರೆ ಅವರ ಅಜ್ಜ ಮತ್ತು ಅಜ್ಜಿ ತೀರಿಕೊಂಡ ಬಳಿಕ ಅಂದರೆ ಅವರ ತಾಯಿ ಮೃತಪಡುವ ಒಂದು ವರ್ಷದ ಹಿಂದಿನಿಂದ ಆಕೆ ತನಗೆ ಮನೆಯಲ್ಲಿರಲು ಆಗುವುದಿಲ್ಲ

ಎಂದು ಹೇಳಿ ಚಿಕ್ಕಮಗಳೂರಿನ ಬಸ್ ನಿಲ್ದಾಣ ಮತ್ತು ಐ.ಜಿ. ರಸ್ತೆಯ ಫುಟ್‌ಪಾತ್‌ನಲ್ಲಿ ತಿರುಗಾಡಿಕೊಂಡು ಇದ್ದುದ್ದಾಗಿ, ಕೆಲವೊಮ್ಮೆ ಮನೆಗೆ ಬಂದು ಉಳಿದುಕೊಂಡು ಬೆಳಿಗ್ಗೆ ಪುನಃ ಮನೆಯಿಂದ ವಾಪಸ್ ಹೋಗುತ್ತಿದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-5 ಫ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 10.05.2024 ರಂದು ಬೆಳಿಗ್ಗೆ 6 ಗಂಟೆಗೆ ಚಾಸಾ.9-ಉಮೇಶ್ ರವರು ಅವರ ಮೊಬೈಲಿಗೆ ಫೋನ್ ಮಾಡಿ ಆ ದಿನ ಬೆಳಗ್ಗಿನ ಜಾವ ಸುಮಾರು 2.30 ಗಂಟೆಗೆ ಅವರು ಐ.ಜಿ. ರಸ್ತೆಯಲ್ಲಿರುವ ಅಂಗಡಿಗಳಿಗೆ ಮತ್ತು ಬೇಕರಿಗಳಿಗೆ ಹಾಲನ್ನು ಹಾಕುತ್ತಿದ್ದಾಗ ಅವರ ತಾಯಿ ಐ.ಜಿ. ರಸ್ತೆಯಲ್ಲಿರುವ ಸುಪ್ರೀಮ್ ಮೆಡಿಕಲ್ ಹತ್ತಿರ ಇರುವ ಫುಟ್‌ಪಾತ್ ನಲ್ಲಿ ಮಲಗಿದ್ದಾಗಿ, ಆಗ ಆರೋಪಿಯಾದ ನೀನು ಆಕೆಯ ಹತ್ತಿರ ಹೋಗಿ ನಿನ್ನ ಕಾಲನ್ನು ಒತ್ತುವಂತೆ ಹೇಳಿದಾಗ ಆಕೆ ನಿನ್ನ ಕಾಲನ್ನು ನಾನು ಯಾಕೆ ಒತ್ತಬೇಕು ಹೋಗು ಎಂದು ಹೇಳಿದ್ದಾಗಿ, ನಿನಗೆ ಸಿಟ್ಟು ಬಂದು ಅಲ್ಲಿ ಬಿದ್ದಿದ್ದ ಒಂದು ಸೈಜ್ ಕಲ್ಲನ್ನು ತೆಗೆದುಕೊಂಡು ಬಂದು ಅವರ ತಾಯಿಯ ತಲೆಯ ಮೇಲೆ ಎತ್ತಿ ಹಾಕಿ ಆಕೆಯನ್ನು ಸಾಯಿಸಿದ್ದಾಗಿ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-6 ಫ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆಗ ಚಾಸಾ-9 ಉಮೇಶ್ ಮತ್ತು ಚಾಸಾ.10-ರವಿರವರು ಆರೋಪಿಯಾದ ನಿನ್ನನ್ನು ತಡೆಯಲು ಹೋದಾಗ ನೀನು ಅವರನ್ನು ಕುರಿತು, 'ಸೂಳೆಮಕ್ಕಳಾ, ನೀವು ಬಿಡಿಸಲು ಬಂದರೆ ನಿಮಗೂ ಹೊಡೆಯುತ್ತೇನೆ' ಎಂದು ಹೆದರಿಸಿದ್ದಾಗಿ, ಆದರೂ ಸಹ ಚಾಸಾ-9 ಮತ್ತು ಚಾಸಾ.10 ರವರು ನಿನ್ನನ್ನು ತಡೆದಿದ್ದಾಗಿ, ಆಂಬ್ಯುಲೆನ್ಸ್ ಕರೆಸಿ ಅದರಲ್ಲಿ ಅವರ ತಾಯಿಯನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ, ಅಲ್ಲಿ ವೈದ್ಯರು ಅವರ ತಾಯಿಯನ್ನು ಪರೀಕ್ಷಿಸಿ ಆಕೆ ಮೃತಪಟ್ಟಿದ್ದಾಗಿ ತಿಳಿಸಿದರೆಂಬುದಾಗಿ ಅವರಿಗೆ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-7 ಫ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಅವರು, ಅವರ ಚಿಕ್ಕಮ್ಮ ಮತ್ತು ಚಿಕ್ಕಪ್ಪನಾದ ಚಾಸಾ.3-ಜ್ಯೋತಿ ಮತ್ತು ಚಾಸಾ.4-ಪ್ರಸನ್ನ ರವರಿಗೆ ಫೋನ್ ಮಾಡಿ ಸದರಿ ವಿಷಯವನ್ನು ತಿಳಿಸಿ ಬೇಗ ಬನ್ನಿ ಎಂದು ಕರೆದಿದ್ದಾಗಿ, ನಂತರ ಅವರು ಚಾಸಾ.3 ಮತ್ತು 4 ರವರೊಂದಿಗೆ ಐ.ಜಿ. ರಸ್ತೆಯಲ್ಲಿ ಸುಪ್ರೀಮ್ ಮೆಡಿಕಲ್ ಹತ್ತಿರ ಇರುವ ಫುಟಪಾತ್ ಘಟನೆ ನಡೆದ ಸ್ಥಳಕ್ಕೆ ಹೋಗಿದ್ದಾಗಿ, ನಂತರ ಅಲ್ಲಿಂದ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಹೋಗಿದ್ದಾಗಿ, ಅಲ್ಲಿ ಇರಿಸಿದ್ದ ಅವರ ತಾಯಿಯ ಶವವನ್ನು ನೋಡಿದ್ದಾಗಿ, ಅವರ ತಾಯಿಯ ತಲೆಯ ಎಡಭಾಗಕ್ಕೆ ಕಲ್ಲಿನ ಏಟು ಬಿದ್ದು ರಕ್ತಗಾಯವಾಗಿ ಆಕೆ ಮೃತಪಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-8 ಫ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಅವರು ಅದೇ ದಿನ ಬೆಳಿಗ್ಗೆ 8 ಗಂಟೆಗೆ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಗೆ ಹೋಗಿ ಅವರ ತಾಯಿಯನ್ನು ಕೊಲೆ ಮಾಡಿದ್ದ ಆರೋಪಿಯಾದ ನಿನ್ನ ಮೇಲೆ ಕ್ರಮ ಜರುಗಿಸುವಂತೆ ನಿಪಿ.1 ರಂತೆ ದೂರನ್ನು ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-9 ಫ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದೂರು ಕೊಟ್ಟ ಬಳಿಕ ಪೊಲೀಸರು ಶವಗಾರದಲ್ಲಿ ಅವರ ತಾಯಿ ಕನಕರವರ ಶವ ತನಿಖೆಯನ್ನು ನಡೆಸಿದ್ದಾಗಿ, ನಂತರ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರದಲ್ಲಿ ಪೊಲೀಸರು ನಿಪಿ.3 ಮತ್ತು ನಿಪಿ.4 ರಂತೆ ಫೋಟೋಗಳನ್ನು ತೆಗೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-10 ಫ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಅದೇ ದಿನ ಅಂದರೆ ದಿಃ 10-05-2024 ರಂದು ಅವರು ಚಿಕ್ಕಮಗಳೂರಿನ ಐ.ಜಿ. ರಸ್ತೆಯಲ್ಲಿರುವ ಸುಪ್ರೀಮ್ ಮೆಡಿಕಲ್ ಹತ್ತಿರ ಇರುವ ಫುಟಪಾತ್ ನಲ್ಲಿ ಘಟನೆ ನಡೆದ ಸ್ಥಳಕ್ಕೆ ಪೊಲೀಸರು ಬಂದಿದ್ದಾಗಿ, ಆಗ ಸ್ಥಳದಲ್ಲಿ ಅವರು, ಚಾಸಾ-5 ಪ್ರದೀಪ್ ಮತ್ತು ಚಾಸಾ-6 ಅವಿನಾಶ್ ರವರು ಇದ್ದುದ್ದಾಗಿ, ಅವರ ಸಮಕ್ಷಮ ಅವರು

ತೋರಿಸಿದ ಕೃತ್ಯ ನಡೆದ ಸ್ಥಳದಲ್ಲಿ ಪೋಲೀಸರು ಮಧ್ಯಾಹ್ನ 12.30 ರಿಂದ 1.30 ಗಂಟೆಯವರೆಗೆ ನಿಪಿ.5 ರಂತೆ ಮಹಜರು ಬರೆದಿದ್ದಾಗಿ, ನಿಪಿ.6 ರಂತೆ ಫೋಟೋವನ್ನು ತೆಗೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-11 ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಸದರಿ ಪಂಚನಾಮೆಯನ್ನು ಜರುಗಿಸುವ ಸಮಯದಲ್ಲಿ ಪೊಲೀಸರು ರಸ್ತೆಯ ಬದಿಯಲ್ಲಿ ಬಿದ್ದಿದ್ದ ರಕ್ತದ ಕಲೆಗಳು, ಫುಟ್ ಪಾತ್ ನಲ್ಲಿ ಬಿದ್ದಿದ್ದ ರಕ್ತದ ಕಲೆಗಳು ಮತ್ತು ಚರಂಡಿ ಬದಿಯಲ್ಲಿ ಬಿದ್ದಿದ್ದ ರಕ್ತದ ಕಲೆಗಳನ್ನು ಹತ್ತಿಯಿಂದ ಒರೆಸಿ ಸಂಗ್ರಹಿಸಿದ್ದಾಗಿ, ರಕ್ತವಿಲ್ಲದ ಸಾದಾ ಬ್ಯಾಂಡೇಜ್ ಬಟ್ಟೆಯನ್ನು ಮುದ್ದೆಮಾಲು-1 ರಂತೆ, ರಸ್ತೆಯ ಬದಿಯಲ್ಲಿದ್ದ ರಕ್ತಮಿಶ್ರಿತ ಬ್ಯಾಂಡೇಜ್ ಬಟ್ಟೆಯನ್ನು ಮುದ್ದೆಮಾಲು-2 ರಂತೆ, ಫುಟ್‌ಪಾತ್ ಮತ್ತು ಫುಟ್‌ಪಾತ್ ನಿಂದ ಚರಂಡಿಯವರೆಗೆ ಹರಿದಿದ್ದ ರಕ್ತವನ್ನು ಸಂಗ್ರಹಿಸಿದ್ದ ಬ್ಯಾಂಡೇಜ್ ಬಟ್ಟೆ ಮುದ್ದೆಮಾಲು-3 ರಂತೆ ಮತ್ತು ಅವರ ತಾಯಿ ಮೃತಪಡುವ ಸಮಯದಲ್ಲಿ ಧರಿಸಿದ್ದ ಕಿತ್ತಲೆ ಬಣ್ಣದ ಹೂಗಳ ಡಿಸೈನ್ ಇದ್ದ ಚೂಡಿದಾರ ಟಾಪ್, ನೀಲಿ ಬಣ್ಣದ ಸೀರೆಯನ್ನು ಮುದ್ದೆಮಾಲು-4 ಮತ್ತು 5 ರಂತೆ ಸಂಗ್ರಹಿಸಿದ್ದಾಗಿ ಹಾಗೂ ಎಲ್ಲಾ ಪ್ರಕ್ರಿಯೆಗಳು ಮುಗಿಸಿದ ಬಳಿಕ ಪೊಲೀಸರು ಅವರ ತಾಯಿಯ ಶವವನ್ನು ಅವರಿಗೆ ನೀಡಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-12 ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 03.07.2024 ರಂದು ಪೊಲೀಸರು ಅವರನ್ನು ಚಿಕ್ಕಮಗಳೂರಿನ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದಾಗಿ, ಅಲ್ಲಿ ನ್ಯಾಯಾಧೀಶರು ಅವರನ್ನು ವಿಚಾರಿಸಿದ್ದಾಗಿ, ಆಗ ಅವರು ಅವರಿಗೆ ನಡೆದ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-13 ಪ್ರಾ.ಸಾ.2 ಉಮೇಶ್ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀನು ಅವರಿಗೆ ಗೊತ್ತಿದ್ದುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-14 ಫ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಅವರು ಈಗ್ಗೆ 12 ವರ್ಷಗಳಿಂದ ಚಿಕ್ಕಮಗಳೂರಿನ ಬಸ್ ನಿಲ್ದಾಣದಲ್ಲಿರುವ ಹೋಟೆಲ್, ಅಂಗಡಿ ಮತ್ತು ಬೇರೆ ಬೇರೆ ರಸ್ತೆಗಳಲ್ಲಿರುವ ಅಂಗಡಿ ಮತ್ತು ಹೋಟೆಲುಗಳಿಗೆ ಅಂದರೆ ಸುಮಾರು 50 ಅಂಗಡಿ ಮತ್ತು ಹೋಟೆಲುಗಳಿಗೆ ಅವರು ನಂದಿನಿ ಹಾಲಿನ ಪ್ಯಾಕೇಟುಗಳನ್ನು ಸರಬರಾಜು ಮಾಡುತ್ತಿದ್ದುದಾಗಿ, ಸಾಮಾನ್ಯವಾಗಿ ಬೆಳಗಿನ ಜಾವ 2.30 ಗಂಟೆಯಿಂದ 3 ಗಂಟೆ ಸುಮಾರಿಗೆ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಹತ್ತಿರ ನಂದಿನಿ ಹಾಲಿನ ಪ್ಯಾಕೇಟುಗಳನ್ನು ಪಡೆದುಕೊಂಡು ಅವುಗಳನ್ನು ಅಂಗಡಿ ಹೋಟೆಲುಗಳಿಗೆ ಕೊಟ್ಟು ಬರುವ ಕೆಲಸವನ್ನು ಮಾಡುತ್ತಿದ್ದುದಾಗಿ, ರಾತ್ರಿ 11.30 ಗಂಟೆಯವರೆಗೆ ಅವರಿಗೆ ಕೆಲಸ ಇರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-15 ಫ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಈಗ್ಗೆ 3 ರಿಂದ 4 ವರ್ಷಗಳಿಂದ ಕನಕ ಎಂಬ ಅಜ್ಜಿ ಐ.ಜಿ. ರಸ್ತೆಯ ಬದಿಯಲ್ಲಿ ಬಿಕ್ಷೆ ಬೇಡಿಕೊಂಡು ಇದ್ದುದ್ದಾಗಿ, ಆಗ ಆಕೆ ಅವರಿಗೆ ಪರಿಚಯವಾಗಿದ್ದುದಾಗಿ, ಆಕೆ ಕಾಫಿ, ಟೀ ಇದ್ದರೆ ಕೊಡಿಸು ಎಂದು ಅವರನ್ನು ಕೇಳಿ ಪಡೆದುಕೊಳ್ಳುತ್ತಿದ್ದುದಾಗಿ, ಐ.ಜಿ ರಸ್ತೆಯಲ್ಲಿರುವ ನಂದಿನಿ ಬೂತ್ ನಿಂದ ಸ್ವಲ್ಪ ದೂರದಲ್ಲಿರುವ ಸುಪ್ರೀಮ್ ಮೆಡಿಕಲ್ ಹತ್ತಿರ ಇರುವ ಫುಟಪಾತ್ ನಲ್ಲಿ ಸದರಿ ಕನಕ ಮಲಗಿಕೊಳ್ಳುತ್ತಿದ್ದು, ಆಕೆ ತನಗೆ ಒಬ್ಬ ಮಗ ಇರುವುದಾಗಿ ಹೇಳುತ್ತಿದ್ದುದ್ದಾಗಿ, ಆಕೆ ತನ್ನ ಬಳಿ ಇದ್ದ ಒಂದು ಬ್ಯಾಗಿನಲ್ಲಿ ಅವರ ಮಗನ ಮೊಬೈಲ್ ನಂಬರನ್ನು ಒಂದು ಚೀಟಿಯಲ್ಲಿ ಬರೆದುಕೊಂಡಿದ್ದು, ಅದನ್ನು ಆಕೆ ಅವರಿಗೆ ತೋರಿಸಿ ತನ್ನ ಮಗನಿಗೆ ಫೋನ್ ಮಾಡು ಎಂದು ಹೇಳುತ್ತಿದ್ದ ಮೇರೆಗೆ ಅವರು ಒಂದೆರಡು ಬಾರಿ ಅವರ ಮೊಬೈಲಿನಿಂದ ಆಕೆಯ ಮಗನಿಗೆ ಫೋನ್ ಮಾಡಿ ಮಾತನಾಡಲು ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-16 ಫ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಈಗ್ಗೆ ಒಂದೂವರೆ ವರ್ಷದ ಹಿಂದೆ ಒಂದು ದಿನ ರಾತ್ರಿ 11.30 ಗಂಟೆಯಲ್ಲಿ ಅವರು ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಿಂದ ಅವರ ಮನೆಗೆ ಹೋಗುತ್ತಿದ್ದಾಗಿ, ಸದರಿ ಸುಪ್ರೀಮ್ ಮೆಡಿಕಲ್ ಹತ್ತಿರ ಇರುವ ಫುಟಪಾತ್ ನಲ್ಲಿ ಕನಕರವರು ಮಲಗಿಕೊಂಡಿದ್ದಾಗಿ, ಆರೋಪಿಯಾದ ನೀನು ಆಕೆಯ ಬಳಿ ಇದ್ದು ಆಕೆಯನ್ನು ಕುರಿತು 'ತನ್ನ ಕಾಲನ್ನು ಒತ್ತುವಂತೆ ಹೇಳುತ್ತಿದ್ದು, ಆಗ ಕನಕರವರು 'ಹೋಗೋ

ನಾನು ಯಾಕೆ ನಿನ್ನ ಕಾಲನ್ನು ಒತ್ತಲಿ' ಎಂದು ಬೈಯುತ್ತಿದ್ದುದ್ದಾಗಿ, ಆಗ ಅವರು ನಿನ್ನನ್ನು ಕುರಿತು, ನಿನಗೆ ಯಾಕೆ ಬೇಕು, ಯಾಕೆ ಅಜ್ಜಿಯ ಹತ್ತಿರ ಗಲಾಟೆ ಮಾಡುತ್ತೀಯಾ, ಅಲ್ಲಿಂದ ಹೋಗು ಎಂದು ಬೈದು ಕಳುಹಿಸಿ ಅವರು ಅವರ ಮನೆಗೆ ಹೋಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-17 ಪ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಅವರು ಬೆಳಗಿನ ಜಾವ 2.30 ಗಂಟೆ ಸುಮಾರಿಗೆ ಡೈರಿ ಹಾಲಿನ ಪ್ಯಾಕೇಟುಗಳನ್ನು ಇಳಿಸಿಕೊಳ್ಳಲು ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣಕ್ಕೆ ಹೋಗಲೆಂದು ಅವರ ಸ್ಕೂಟಿಯಲ್ಲಿ ಸುಪ್ರೀಮ್ ಮೆಡಿಕಲ್ ಹತ್ತಿರ ಹೋಗುತ್ತಿದ್ದುದ್ದಾಗಿ, ಆ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿ ರಮೇಶ ಎಂಬುವವರ ಬೇಕರಿಯಲ್ಲಿ ಕೆಲಸ ಮಾಡುತ್ತಿದ್ದ ಚಾಸಾ.10-ರವಿರವರೂ ಸಹ ಐ.ಜಿ. ರಸ್ತೆಯಲ್ಲಿ ನಡೆದುಕೊಂಡು ಹಾಲಿನ ಪ್ಯಾಕೇಟುಗಳನ್ನು ತೆಗೆದುಕೊಂಡು ಅವರ ಎದುರಿಗೆ ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-18 ಪ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರು ಮತ್ತು ಚಾಸಾ-10 ರವರು ಅಲ್ಲಿ ನಿಂತಿದ್ದಾಗ ಆರೋಪಿಯಾದ ನೀನು ಒಂದು ಸೈಜ್ ಕಲ್ಲನ್ನು ಕೈಯಲ್ಲಿ ಎತ್ತಿ ಹಿಡಿದುಕೊಂಡಿದ್ದಾಗಿ, ಫುಟ್ಪಾತಿನ ಮೇಲೆ ಮಲಗಿದ್ದ ಕನಕರವರನ್ನು ಕುರಿತು 'ನನ್ನ ಕಾಲನ್ನು ಒತ್ತುವುದಿಲ್ಲವಾ, ಬೇವರ್ಸಿ ಮುಂಡೆ' ಎಂದು ಬೈದು ಸದರಿ ಸೈಜ್ ಕಲ್ಲನ್ನು ಆಕೆಯ ತಲೆಯ ಮೇಲೆ ಹಾಕಿದ್ದಾಗಿ, ಆಗ ಕನಕರವರ ತಲೆಗೆ ಗಾಯವಾಗಿ ರಕ್ತಬಂದಿದ್ದಾಗಿ, ಆಗ ಅವರು ಮತ್ತು ಚಾಸಾ.10 ರವಿರವರು ನಿನ್ನನ್ನು ತಡೆಯಲು ಹೋದಾಗ ನೀನು ಅವರನ್ನು ಕುರಿತು 'ಸೂಳೆಮಕ್ಕಳಾ, ಹತ್ತಿರ ಬಂದರೆ ನಿಮ್ಮ ಮೇಲೂ ಕಲ್ಲನ್ನು ಎತ್ತಿ ಹಾಕುತ್ತೇನೆ' ಎಂದು ಹೆದರಿಸಿದ್ದಾಗಿ, ಅವರು ಮತ್ತು ಚಾಸಾ.10 ರವರು ನಿನ್ನನ್ನು ಗದರಿಸಿ, ನಿನ್ನನ್ನು ಹಿಡಿದುಕೊಂಡಿದ್ದಾಗಿ, ಆಗ ನೀನು ನಿನ್ನ ಕೈಯಲ್ಲಿದ್ದ ಕಲ್ಲನ್ನು ಕೆಳಗೆ ಬೀಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-19 ಪ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಚಾಸಾ.10 ರವರು ಆಂಬ್ಯುಲೇನ್ಸಿಗೆ ಫೋನ್ ಮಾಡಿ ಕರೆಸಿ

ಆಂಬ್ಯುಲೆನ್ಸಿನಲ್ಲಿ ಕನಕರವರನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ, ಅವರು ಮತ್ತು ಚಾಸಾ.10 ರವರು ಅವರ ಸ್ಕೂಟಿಯಲ್ಲಿ ಸದರಿ ಆಸ್ಪತ್ರೆಗೆ ಹೋಗಿದ್ದಾಗಿ, ಅಲ್ಲಿ ವೈದ್ಯರು ಕನಕರವರನ್ನು ಪರೀಕ್ಷಿಸಿ ಆಕೆ ಮೃತಪಟ್ಟಿರುವುದಾಗಿ ತಿಳಿಸಿ, ಶವವನ್ನು ಸದರಿ ಆಸ್ಪತ್ರೆಯ ಶವಗಾರದಲ್ಲಿ ಇರಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-20 ಫ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಅವರು ಮೃತ ಕನಕರವರ ಮಗನಾದ ಫ್ರಾಸಾ.1 ರವರಿಗೆ ಫೋನ್ ಮಾಡಿ ನಡೆದ ವಿಚಾರವನ್ನು ತಿಳಿಸಿದ್ದಾಗಿ, ನಂತರ ಅವರು ಅವರ ಕೆಲಸಕ್ಕೆ ಹೋಗಿದ್ದಾಗಿ, ಫ್ರಾಸಾ.1 ರವರು ಆಸ್ಪತ್ರೆಗೆ ಹೋಗಿದ್ದಾಗಿ ನಂತರ ಫ್ರಾಸಾ.1 ರವರು ಆರೋಪಿಯಾದ ನಿನ್ನ ವಿರುದ್ಧ ಚಿಕ್ಕಮಗಳೂರು ನಗರ ಪೊಲೀಸರಿಗೆ ನಿಪಿ.1 ರಂತೆ ದೂರನ್ನು ಕೊಟ್ಟ ವಿಚಾರ ತಿಳಿದಿದ್ದಾಗಿ, ಪೊಲೀಸರು ಅವರನ್ನು ವಿಚಾರಿಸಿದ್ದಾಗಿ, ಅವರು ನಡೆದ ವಿಚಾರವನ್ನು ಅವರಿಗೆ ತಿಳಿಸಿ ಹೇಳಿಕೆ ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-21 ಫ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆದಾದ ಒಂದುವರೆ ತಿಂಗಳುಗಳ ಬಳಿಕ ಪೊಲೀಸರು ಅವರನ್ನು ಚಿಕ್ಕಮಗಳೂರಿನ ನ್ಯಾಯಾಧೀಶರ ಬಳಿ ಹಾಜರುಪಡಿಸಿದ್ದಾಗಿ, ಅವರು ಅವರಿಗೂ ಸಹ ನಡೆದ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-22 ಫ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿಯಾದ ನೀನು ಕನಕರವರ ತಲೆಯ ಮೇಲೆ ಎತ್ತಿ ಹಾಕಿದ್ದ ಸೈಜ್ ಕಲ್ಲನ್ನು ನೋಡಿ ಮುದ್ದೆಮಾಲು-6 ಎಂದು, ಕನಕರವರು ಮೃತಪಡುವ ಸಮಯದಲ್ಲಿ ಆಕೆಯ ಮೈಮೇಲಿದ್ದ ಬಟ್ಟೆಗಳನ್ನು ನೋಡಿ ಮು.ಮಾ-4 ಮತ್ತು ಮು.ಮಾ-5 ಎಂದು ಗುರುತಿಸಿರುತ್ತಾರೆ ಹಾಗೂ ನಿಪಿ-3 ಮತ್ತು ನಿಪಿ-4 ಫೋಟೋಗಳಲ್ಲಿ ಮೃತ ಕನಕರವರ ಶವ ಮತ್ತು ಆಕೆಯ ತಲೆಗೆ ಆದ ಗಾಯಗಳು ಕಂಡುಬರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-23 ಪ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರು ಫೋನ್ ಮಾಡಿ ಪ್ರಾಸಾ.1 ರವರಿಗೆ ವಿಷಯವನ್ನು ತಿಳಿಸಿದ ಬಳಿಕ ಅದೇ ದಿನ ಅಂದರೆ ದಿಃ 10-05-2024 ರಂದು ಬೆಳಿಗ್ಗೆ 6 ಗಂಟೆಗೆ ಅವರು ಮತ್ತು ಅವರ ಕಡೆಯವರು ಚಿಕ್ಕಮಗಳೂರಿಗೆ ಬಂದಾಗ ಅವರು ಪ್ರಾಸಾ.1 ರವರನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳವನ್ನು ತೋರಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-24 ಪ್ರಾ.ಸಾ.3 ಅವಿನಾಶ್ ಇವರು ತಮ್ಮ ಸಾಕ್ಷ್ಯದಲ್ಲಿ ಪ್ರಾಸಾ.1 ರವರ ತಾಯಿಯ ಕೊಲೆಯಾಗಿದ್ದ ವಿಚಾರಕ್ಕೆ ಸ್ಥಳದಲ್ಲಿ ಮಹಜರನ್ನು ಜರುಗಿಸಲು ದಿನಾಂಕ 10.05.2024 ರಂದು ಚಿಕ್ಕಮಗಳೂರು ಐ ಜಿ ರಸ್ತೆಯಲ್ಲಿರುವ ಸುಪ್ರಿಂ ಮೆಡಿಕಲ್ ಹತ್ತಿರ ಬರುವಂತೆ ಪ್ರಾಸಾ.1 ರವರು ಅವರನ್ನು ಕರೆದ ಮೇರೆಗೆ ಅವರು ಅದೇ ದಿನ ಅಲ್ಲಿಗೆ ಹೋಗಿದ್ದಾಗಿ, ಅಲ್ಲಿ ಪೊಲೀಸರು, ಅವರು, ಪ್ರಾಸಾ.1 ಮತ್ತು ಚಾಸಾ.5 ರವರು ಹಾಜರಿದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-25 ಪ್ರಾ.ಸಾ.3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರು ಚಿಕ್ಕಮಗಳೂರಿನ ಐ ಜಿ ರಸ್ತೆಯಲ್ಲಿರುವ ಸುಪ್ರಿಂ ಮೆಡಿಕಲ್ ಬಳಿ ಬಂದಾಗ ಪೊಲೀಸರು ಅವರಿಗೆ ಮತ್ತು ಚಾಸಾ-5 ರವರಿಗೆ ಪಂಚನಾಮೆಗೆ ಸಹಕರಿಸುವಂತೆ ನಿಪಿ-7 ರಂತೆ ನೋಟೀಸನ್ನು ಜಾರಿ ಮಾಡಿದ್ದಾಗಿ, ಸದರಿ ಮೆಡಿಕಲ್ ಹತ್ತಿರ ಪುಟ್ ಪಾತ್ ರಸ್ತೆಯಲ್ಲಿ ಪ್ರಾಸಾ.1 ರವರು ಅವರ ಮತ್ತು ಚಾಸಾ.5 ರವರ ಸಮಕ್ಷಮ ಪೊಲೀಸರಿಗೆ ಸ್ಥಳವನ್ನು ತೋರಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-26 ಪ್ರಾ.ಸಾ.4 ಪ್ರಸನ್ನಕುಮಾರ್ ಕೆ.ಕೆ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 10.05.2024 ರಂದು ಪ್ರಾಸಾ.1 ರವರು ಬೆಳಿಗ್ಗೆ 6.30 ಗಂಟೆಗೆ ಅವರಿಗೆ ಫೋನ್ ಮಾಡಿ, ಅವರ ತಾಯಿ ಕನಕರವರನ್ನು ಯಾರೋ ಕಲ್ಲಿನಿಂದ ಹೊಡೆದು ಕೊಲೆ ಮಾಡಿದ್ದಾರೆ ಎಂದು ತಿಳಿಸಿದ್ದಾಗಿ, ಆಗ ಅವರು ಮತ್ತು ಚಾಸಾ.3 ರವರು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ

ಹೋಗಿ, ಆಸ್ಪತ್ರೆಯ ಶವಗಾರದಲ್ಲಿ ಇರಿಸಿದ್ದ ಕನಕರವರ ಶವವನ್ನು ನೋಡಿದ್ದಾಗಿ, ನಂತರ ಅವರು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಗೆ ಹೋಗಿದ್ದಾಗಿ, ಫ್ರಾಸಾ.1 ರವರು ಸದರಿ ಪೊಲೀಸರಿಗೆ ನಿಪಿ.1 ರಂತೆ ದೂರನ್ನು ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-27 ಫ್ರಾ.ಸಾ.4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಪುನಃ ಅವರು ಶವಗಾರಕ್ಕೆ ಹೋದಾಗ ಪೊಲೀಸರು ಅವರೊಂದಿಗೆ ಶವಗಾರಕ್ಕೆ ಬಂದಿದ್ದಾಗಿ, ಅಲ್ಲಿ ಅವರು, ಚಾಸಾ.2 ಮತ್ತು 3 ರವರು ಹಾಜರಿದ್ದುದ್ದಾಗಿ, ಅವರು ಕನಕರವರ ಶವವನ್ನು ನೋಡಿದಾಗ ಅವರ ತಲೆ ಮತ್ತು ಮುಖದ ಮೇಲೆ ಗಾಯವಾಗಿ ರಕ್ತ ಬಂದಿದ್ದಾಗಿ, ತಲೆಗೆ ಹೊಡೆದು ನುಜುಗುಜ್ಜಾಗಿರುವುದು ಕಂಡುಬಂದಿದ್ದಾಗಿ, ಕಲ್ಲನ್ನು ಕನಕರವರ ತಲೆಯ ಮೇಲೆ ಎತ್ತಿ ಹಾಕಿ ಕೊಲೆ ಮಾಡಿರುವುದು ಕಂಡುಬಂದಿದ್ದಾಗಿ, ಆರೋಪಿಯಾದ ನೀನು ಕನಕರವರನ್ನು ಕೊಲೆ ಮಾಡಿದ್ದಾಗಿ ಪೊಲೀಸರಿಂದ ತಿಳಿದಿದ್ದಾಗಿ, ಕನಕರವರ ಶವದ ಮೇಲೆ ಕಿತ್ತಲೆ ಬಣ್ಣದ ನೀಲಿ ಬಣ್ಣದ ಹೂವುಗಳಿರುವ ಚೂಡಿದಾರ ಟಾಪ್, ನೀಲಿ ಬಣ್ಣದ ಸೀರೆ, ಕಂದುಬಣ್ಣದ ವೇಲ್ ಮತ್ತು ಎರಡು ಕಾಲುಗಳ ಬೆರಳುಗಳಲ್ಲಿ ಕಾಲುಂಗುರ ಇರುವುದು ಕಂಡುಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-28 ಫ್ರಾ.ಸಾ.4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿಯಾದ ನೀನು ಕನಕರವರನ್ನು ಕುರಿತು ತನ್ನ ಕಾಲನ್ನು ಒತ್ತುವಂತೆ ಕೇಳಿದಾಗ ಕನಕ ಮತ್ತು ನಿನ್ನ ನಡುವೆ ವಾಗ್ವಾದ ನಡೆದು ನೀನು ಕನಕರವರನ್ನು ಫುಟ್ಪಾತಿನ ಮೇಲೆ ತಳ್ಳಿ ಕಲ್ಲನ್ನು ಆಕೆಯ ತಲೆಯ ಮೇಲೆ ಎತ್ತಿ ಹಾಕಿ ಕೊಲೆ ಮಾಡಿದ್ದಾಗಿ ತಿಳಿದಿದ್ದಾಗಿ, ಆ ಬಗ್ಗೆ ಅವರು ಪೊಲೀಸರಿಗೆ ಅಭಿಪ್ರಾಯವನ್ನು ತಿಳಿಸಿದ್ದಾಗಿ, ಪೊಲೀಸರು ಕನಕರವರ ಶವವನ್ನು ಪರೀಕ್ಷಿಸಿ ನಿಪಿ.8 ರಂತೆ ಮಹಜರು ಜರುಗಿಸಿದ್ದಾಗಿ, ಪೊಲೀಸರು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರದ ಕಟ್ಟೆಯ ಮೇಲೆ ಕನಕರವರ ಶವ ಪರೀಕ್ಷೆ ನಡೆಸುವ ಸಮಯದಲ್ಲಿ ನಿಪಿ.3 ಮತ್ತು ಪಿ.4 ರಂತೆ ಫೋಟೋಗಳನ್ನು ತೆಗೆದಿದ್ದಾಗಿ, ಸದರಿ ಫೋಟೋಗಳಲ್ಲಿ ಕನಕರವರ ಶವ ಮತ್ತು ಆಕೆಯ ತಲೆ ಮತ್ತು ಮುಖದಲ್ಲಿ ಗಾಯಗಳಾಗಿರುವುದು ಕಂಡುಬಂದಿದ್ದಾಗಿ ಹಾಗೂ ಕಿತ್ತಲೆ ಬಣ್ಣದ ಹೂಗಳ ಡಿಸೈನ್ ಇದ್ದ ಚೂಡಿದಾರ ಟಾಪ್ ಮುದ್ದೆಮಾಲು-4 ಮತ್ತು ನೀಲಿ ಬಣ್ಣದ ಸೀರೆ

ಮುದ್ದೆಮಾಲು- 5 ನ್ನು ಆ ದಿನ ಕನಕರವರ ಶವದ ಮೇಲೆ ನೋಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-29 ಪ್ರಾ.ಸಾ.4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಈಗ್ಗೆ 28 ವರ್ಷಗಳ ಹಿಂದೆ ಕನಕರವರನ್ನು ಚಿಕ್ಕಮಗಳೂರು ಕುರುವಂಗಿಯ ದೇವರಾಜ್ ಎಂಬುವರೊಂದಿಗೆ ಮದುವೆ ಮಾಡಿದ್ದಾಗಿ, ಅವರ ಗಂಡ ಈಗ್ಗೆ 26 ವರ್ಷಗಳ ಹಿಂದೆ ಮೃತಪಟ್ಟಿದ್ದಾಗಿ, ನಂತರ ಕನಕರವರು ಮೂಡಿಗೆರೆ ತಾಲ್ಲೂಕು ನಡುವಿನ ಮಡ್ಕಲ್‌ನಲ್ಲಿರುವ ಅವರ ತಂದೆಯ ಮನೆಯಲ್ಲಿ ವಾಸವಾಗಿದ್ದಾಗಿ, ಆಕೆಗೆ ಖರ್ಚಿಗೆಂದು ಅವರ ಮಗ ಹಣ ಕೊಡುತ್ತಿದ್ದರೂ ಸಹ ಅವರು ಚಿಕ್ಕಮಗಳೂರು ನಗರದಲ್ಲಿ ಹೋಟೆಲ್ ಒಂದರಲ್ಲಿ ಕೆಲಸ ಮಾಡಿಕೊಂಡಿದ್ದಾಗಿ ಅವರು ಹೇಳಿಕೊಳ್ಳುತ್ತಿದ್ದುದ್ದಾಗಿ, ವಾರಕ್ಕೆ ಅಥವಾ ತಿಂಗಳಿಗೊಮ್ಮೆ ಅವರು ಊರಿಗೆ ಬಂದು ಹೋಗುತ್ತಿದ್ದುದಾಗಿ, ಪೊಲೀಸರು ಶವ ತನಿಖೆ ನಡೆಸುವ ಸಮಯದಲ್ಲಿ ಅವರು ಮತ್ತು ಚಾಸಾ.3 ರವರು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-30 ಪ್ರಾ.ಸಾ.5 ಕೃಷ್ಣಶೆಟ್ಟಿ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀನು ಅವರಿಗೆ ಗೊತ್ತಿದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-31 ಪ್ರಾ.ಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು 2024 ನೇ ಇಸವಿ ಮೇ ತಿಂಗಳಿನಲ್ಲಿ ಒಂದು ದಿನ ನಗರ ಠಾಣೆಯ ಪೊಲೀಸರು ಅವರನ್ನು ಮತ್ತು ಚಾಸಾ.7-ಪ್ರೀತಮ್ ರವರನ್ನು ಅವರ ಠಾಣೆಗೆ ಕರೆಸಿ, ಚಿಕ್ಕಮಗಳೂರಿನ ಐ.ಜಿ. ರಸ್ತೆಯ ಫುಟ್ಪಾತಿನಲ್ಲಿ ಒಬ್ಬ ಮಹಿಳೆಯ ಕೊಲೆಯಾಗಿದ್ದ ಬಗ್ಗೆ ಸಾಕ್ಷಿದಾರರಾಗಿ ಸಹಕರಿಸಬೇಕೆಂದು ಪೊಲೀಸರು ಅವರಿಬ್ಬರಿಗೆ ನಿಪಿ.10 ರಂತೆ ನೋಟೀಸನ್ನು ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-32 ಫ್ರಾ.ಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆ ದಿನ ಠಾಣೆಯಲ್ಲಿ ಆರೋಪಿಯಾದ ನೀನು ಪೊಲೀಸರ ವಶದಲ್ಲಿದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-33 ಫ್ರಾ.ಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಪೊಲೀಸರು ಅವರನ್ನು, ಚಾಸಾ.7 ಮತ್ತು ನಿನ್ನನ್ನು ಚಿಕ್ಕಮಗಳೂರಿನ ಐ.ಜಿ. ರಸ್ತೆಯಲ್ಲಿರುವ ಸುಪ್ರೀಂ ಮೆಡಿಕಲ್ಸ್ ಹತ್ತಿರ ಇರುವ ಫುಟ್ಪಾತಿನಲ್ಲಿ ಕೊಲೆಯಾಗಿದ್ದ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದಾಗಿ, ನೀನು ಅವರಿಗೆ ಸದರಿ ಸ್ಥಳವನ್ನು ತೋರಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-34 ಫ್ರಾ.ಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಸದರಿ ರಸ್ತೆಯ ಫುಟ್ಪಾತಿನಲ್ಲಿ ಬಟ್ಟೆಗಳು, ಪ್ಲಾಸ್ಟಿಕ್ ಚೀಲ ಮತ್ತು ಮತ್ತು ವಸ್ತುಗಳ ಮಧ್ಯದಲ್ಲಿದ್ದ ಒಂದು ಸೈಜ್ ಕಲ್ಲನ್ನು ಆರೋಪಿಯಾದ ನೀನು ತೆಗೆದು ತೋರಿಸಿ ಅದೇ ಕಲ್ಲನ್ನು ಮಹಿಳೆಯ ತಲೆಯ ಮೇಲೆ ಎತ್ತಿ ಹಾಕಿ ಆಕೆಯ ಕೊಲೆ ಮಾಡಿದ್ದಾಗಿ ಆರೋಪಿಯಾದ ನೀನು ತಿಳಿಸಿದ್ದಾಗಿ, ಸದರಿ ಕಲ್ಲು ಮುದ್ದೆಮಾಲು-6 ನ್ನು ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡು ಪಂಚರ ಸಮಕ್ಷಮ ನಿಪಿ.11 ರಂತೆ ಮಹಜರನ್ನು ಮಧ್ಯಾಹ್ನ 3.30 ಗಂಟೆಯಿಂದ 4.30 ಗಂಟೆಯವರೆಗೆ ಬರೆದುಕೊಂಡಿದ್ದಾಗಿ, ಆಗ ನಿಪಿ.12 ಮತ್ತು ನಿಪಿ.13 ರಂತೆ ಫೋಟೋಗಳನ್ನು ತೆಗೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-35 ಫ್ರಾ.ಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಿಪಿ.12 ಮತ್ತು ನಿಪಿ.13 ರಂತೆ ಫೋಟೋಗಳಲ್ಲಿ ನಿನ್ನ ಇರುವಿಕೆ ಕಂಡುಬರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-36 ಫ್ರಾ.ಸಾ.6 ಜಯಸಿಂಗ್ ನಾಯ್ಕ, ಆಗಿನ ಚಿಕ್ಕಮಗಳೂರು ಲೋಕೋಪಯೋಗಿ ಇಲಾಖೆಯ ಸಹಾಯಕ ಇಂಜಿನಿಯರ್

ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 13-05-2024 ರಂದು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರವರು ಅವರ ಇಲಾಖೆಗೆ ನಿಪಿ.15 ರಂತೆ ಸಲ್ಲಿಸಿದ ಮನವಿ ಮೇರೆಗೆ ಸದರಿ ಠಾಣೆಯ ಮೊಕದ್ದಮೆ ಸಂಖ್ಯೆ 77/2024 ಕ್ಕೆ ಸಂಬಂಧಿಸಿದಂತೆ ದಿನಾಂಕಃ 27-05-2024 ರಂದು ನಗರ ಪೊಲೀಸ್ ಠಾಣೆಯ ಎ.ಎಸ್.ಐ. ಆದ ಚಾಸಾ.30-ಸಿ.ಆರ್.ರಮೇಶಪ್ಪರವರು ಅವರನ್ನು ಚಿಕ್ಕಮಗಳೂರಿನ ಐ.ಜಿ. ರಸ್ತೆಯಲ್ಲಿರುವ ಸುಪ್ರೀಂ ಮೆಡಿಕಲ್ ಮತ್ತು ಶ್ರೀ ಭಾರತ ಮಾತ ಕಾಫಿ ವರ್ಕ್ಸ್ ಮುಂಭಾಗ ಫುಟ್ಪಾತ್ ರಸ್ತೆಗೆ ಕರೆದುಕೊಂಡು ಹೋಗಿ ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಅವರು ಸ್ಥಳದಲ್ಲಿಯೇ ನಿಪಿ.16 ರಂತೆ ನಕಾಶೆಯನ್ನು ತಯಾರಿಸಿದ್ದಾಗಿ, ನಂತರ ಅವರ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ಅವರ ಪತ್ರ ನಿಪಿ.17 ರ ಮುಖಾಂತರ ಸಂಬಂಧಿಸಿದ ಪೊಲೀಸರಿಗೆ ದಿಃ 29-05-2024 ರಂದು ನೀಡಿದ್ದಾಗಿ ಸದರಿ ದಾಖಲೆಗಳನ್ನು ಪೊಲೀಸರು ದಿಃ 06-07-2024 ರಂದು ಸ್ವೀಕರಿಸಿದ್ದಾಗಿ, ನಿಪಿ.6, ನಿಪಿ.12 ಮತ್ತು ನಿಪಿ.13 ಫೋಟೋಗಳಲ್ಲಿ ನಕ್ಷೆಯನ್ನು ತಯಾರಿಸಿದ ಸ್ಥಳ ಕಂಡು ಬರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-37 ಪ್ರಾ.ಸಾ.7 ಪ್ರದೀಪ್ ಇವರು ತಮ್ಮ ಸಾಕ್ಷ್ಯದಲ್ಲಿ ಆ ದಿನ ಫ್ರಾಸಾ.1 ರವರು ಅವರಿಗೆ ಫೋನ್ ಮಾಡಿ ತನ್ನ ತಾಯಿ ಕನಕರವರ ಕೊಲೆಯಾಗಿದೆ ಸಾಕ್ಷಿಗೆ ಸಹಿ ಮಾಡಬೇಕು ಬಾ ಎಂದು ಕರೆದ ಮೇರೆಗೆ ಅವರು ಸದರಿ ಸ್ಥಳಕ್ಕೆ ಹೋಗಿದ್ದಾಗಿ, ಅವರು ಸ್ಥಳಕ್ಕೆ ಹೋದಾಗ ಫ್ರಾಸಾ.1, ಅವರ ಸೋದರ ಸಂಬಂಧಿಯೊಬ್ಬರು ಮತ್ತು ಪೊಲೀಸರು ಇದ್ದುದ್ದಾಗಿ, ಸದರಿ ಸ್ಥಳದಲ್ಲಿ ಫ್ರಾಸಾ.1 ರವರ ತಾಯಿ ಕೊಲೆಯಾಗಿದ್ದ ಬಗ್ಗೆ ಪೊಲೀಸರು ಮಹಜರ್ ಮಾಡಲು ಬಂದಿದ್ದಾಗಿ, ನಿಪಿ.6 ರಂತೆ ಫೋಟೋವನ್ನು ತೆಗೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-38 ಪ್ರಾ.ಸಾ.8 ಡಾಃ ಸೌಮ್ಯ, ಹಿರಿಯ ತಜ್ಞರು, ಮಲ್ಲೇಗೌಡ ಸರ್ಕಾರಿ ಆಸ್ಪತ್ರೆ, ಚಿಕ್ಕಮಗಳೂರು ತಮ್ಮ ಸಾಕ್ಷ್ಯದಲ್ಲಿ ದಿಃ10.05.2024 ರಂದು ಬೆಳಗ್ಗೆ 11.25 ಗಂಟೆಗೆ ಚಿಕ್ಕಮಗಳೂರು ನಗರ ಪೋಲೀಸ್ ಠಾಣೆಯ ಪೋಲೀಸ್ ನಿರೀಕ್ಷಕರಿಂದ ಸುಮಾರು 57 ವರ್ಷ ವಯಸ್ಸಿನ ಶ್ರೀಮತಿ ಕನಕ ಕೋಂ ದೇವರಾಜ್ ಎಂಬ ಮಹಿಳೆಯ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸುವಂತೆ ನೀಡಿದ ಮನವಿ ಮತ್ತು

ನಮೂನೆ -146 ನ್ನು ನಿಪಿ.18 ರಂತೆ ಸ್ವೀಕರಿಸಿದ್ದಾಗಿ, ಮಹಿಳಾ ಪೇದೆ 38-ಧನಲಕ್ಷ್ಮಿ ಅಂದರೆ ಚಾಸಾ.22 ರವರು ಸದರಿ ಮೃತದೇಹವನ್ನು ಗುರುತಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-39 ಪ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರು ಅದೇ ದಿನ ಬೆಳಗ್ಗೆ 11.30 ರಿಂದ ಮಧ್ಯಾಹ್ನ 1.30 ರವರೆಗೆ ಸದರಿ ಮೃತ ದೇಹದ ಮರಣೋತ್ತರ ಪರೀಕ್ಷೆ ನಡೆಸಿದ್ದಾಗಿ ತದನಂತರ ಚಾಸಾ.22-ಧನಲಕ್ಷ್ಮಿ ರವರಿಗೆ ಮೃತದೇಹವನ್ನು ಹಸ್ತಾಂತರಿಸಿದ್ದಾಗಿ, ಪರೀಕ್ಷಾ ಸಮಯದಲ್ಲಿ ಮೃತ ದೇಹವು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಾಗಾರದಲ್ಲಿ ಇದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-40 ಪ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮೃತ ದೇಹವು ಮಹಿಳೆಯ ದೇಹವಾಗಿದ್ದು, 163 ಸೆಂ.ಮಿ ಉದ್ದವಿದ್ದು, ಸಾಧಾರಣಾ ಮೈಕಟ್ಟನ್ನು ಹೊಂದಿದ್ದಾಗಿ, ಕಣ್ಣು ಮತ್ತು ಬಾಯಿ ಎರಡೂ ಮುಚ್ಚಿದ್ದುದಾಗಿ, ಬಾಯಿಯಿಂದ ರಕ್ತಮಿಶ್ರಿತ ನೊರೆ ಬರುತ್ತಿದ್ದುದ್ದಾಗಿ, ದೇಹದ ನಾಲ್ಕು ಅಂಗಗಳಲ್ಲೂ ಶವದ ಸೆಡೆತ (rigor mortis was present in all four limbs) ಇದ್ದುದಾಗಿ ಹಾಗೂ ಕೆಳಗಿನ ಅಂಗಗಳು ಎರಡೂ ಊದಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-41 ಪ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮೃತದೇಹದ ಹೊರ ಭಾಗದಲ್ಲಿ ಈ ಕೆಳಕಂಡ ಗಾಯಗಳು ಕಂಡುಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆಃ-

1) Laceration from right zygomatic region, extending to right temporal occipital and towards left temporal region measuring about 25 cms in length, its breath was 2 cms over right zygomatic region and about 5 cms over left temporal region. Multiple comminuted fracture of both frontal, parietal, sphenoidal temporal, occipital and

ethmoidal bones crushing the brain tissue was noted in occipital region. Brain tissue found popping out of the injury.

2) Contusion over right maxillary region measuring about 10 cm x10 cm.

3) Contusion over left forehead measuring about 8 cm x 5 cm.

4) Both eyes were found blackened.

5) Whole nose was contused and it measured about 3 cm x 4 cm.

6) Contusion over medial aspect of left maxillary region measuring 5 cm x 5 cm.

7) Contusion over right forearm i.e., over lower 1/3rd anterior aspect measuring about 8 cm x 10 cm.

ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-42 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು " on dissection of skull and vertebra, the injury No.1 to 3 described above were noted, on dissection of membrane, multiple lacerations were found, on dissection of brain, the whole brain was found crushed and it was unable to differentiate the parts of the brain, on dissection of thorax, fracture of left 2nd, 3rd, 4th and 5th ribs in the mid clavicular line was found, hemothorax was noted on the left side of chest of about 400 ml of blood, other parts of thorax were found intact, the parts of abdomen were found intact and pale, partially digested rice particles were found in the stomach, other organs were found intact" ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-43 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ತನಿಖಾಧಿಕಾರಿಯ ಕೋರಿಕೆಯಂತೆ ಅವರು ರಕ್ತದ ಮಾದರಿಯನ್ನು ಬ್ಯಾಂಡೇಜ್ ತುಂಡಿನಲ್ಲಿ ಸಂಗ್ರಹಿಸಿ, ಮೃತದೇಹದ ಮೇಲಿದ್ದ ರಕ್ತವಾಗಿದ್ದ ಬಟ್ಟೆಗಳನ್ನು ಸಂಗ್ರಹಿಸಿ, ರಕ್ತದ ಗುಂಪನ್ನು ಹೊಂದಾಣಿಕೆ

ಮಾಡಲು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಡುವಂತೆ ಅವರ ಆಸ್ಪತ್ರೆಯ ಸೀಲು ಮತ್ತು ಮೊಹರಿನೊಂದಿಗೆ ತನಿಖಾಧಿಕಾರಿಗೆ ಕಳುಹಿಸಿಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-44 ಪ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು, ಮರಣೋತ್ತರ ಪರೀಕ್ಷೆಯ ಆಧಾರದ ಮೇಲೆ ರಕ್ತಸ್ರಾವ, ಅಘಾತ ಮತ್ತು ಮೆದುಳಿನಂತಹ ಪ್ರಮುಖ ಅಂಗಗಳಿಗೆ ಹಾನಿಯಾಗಿರುವುದರಿಂದ ಸಾವು ಸಂಭವಿಸಿದೆ ಎಂದು ಅವರು ಅಭಿಪ್ರಾಯಪಟ್ಟು, ಅವರು ನಿಪಿ.19 ರಂತೆ ಮರಣೋತ್ತರ ಪರೀಕ್ಷಾ ವರದಿಯನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-45 ಪ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮೃತದೇಹದ ಮೇಲೆ ಚೂಡಿದಾರ್ ಟಾಪ್ ಮತ್ತು ಸೀರೆ ಮುದ್ದೆಮಾಲು -4 ಮತ್ತು 4 ಕಂಡು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-46 ಪ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ10.09.2024 ರಂದು ತನಿಖಾಧಿಕಾರಿಯು ನಿಪಿ.20 ರಂತೆ ಮನವಿ ಪತ್ರದೊಂದಿಗೆ ಅಮಾನತುಪಡಿಸಿಕೊಂಡ ಸೀಲಾದ ಒಂದು ಕಲ್ಲು ಮುದ್ದೆಮಾಲು-6 ನ್ನು ಹಾಜರುಪಡಿಸಿ, ಸದರಿ ಕಲ್ಲಿನಿಂದ ಹಲ್ಲೆ ಮಾಡಿದರೆ ನಿಪಿ.19 ರಲ್ಲಿ ನಮೂದಿಸಿರುವ ಗಾಯಗಳು ಮೃತ ದೇಹದ ಮೇಲೆ ಆಗುವ ಸಾಧ್ಯತೆಯ ಬಗ್ಗೆ ಅವರು ತಮ್ಮ ಅಭಿಪ್ರಾಯವನ್ನು ಕೇಳಿದ್ದು, ಸುಮಾರು 65 ಸೆಂ.ಮಿ ಸುತ್ತಳತೆಯ 23 ಸೆಂ.ಮಿ ಉದ್ದವಿರುವ ಸುಮಾರು 17 ಕೆ.ಜಿ ತೂಕವಿದ್ದ ಕಲ್ಲನ್ನು ಅವರು ಪರೀಕಿಸಿದ್ದಾಗಿ ನಂತರ ಅವರು ದಿಃ11.09.2024 ರಂದು ಸದರಿ ಕಲ್ಲಿನಿಂದ ಹಲ್ಲೆ ಮಾಡಿದಲ್ಲಿ ನಿಪಿ.19 ರಲ್ಲಿ ನಮೂದಿಸಿರುವ ಬಾಹ್ಯ ಮತ್ತು ಆಂತರಿಕ ಗಾಯಗಳಾಗಿ ಸಾವು ಸಂಭವಿಸುತ್ತದೆ ಎಂದು ನಿಪಿ.21 ರಂತೆ ಅಭಿಪ್ರಾಯವನ್ನು ನೀಡಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-47 ಪ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಸದರಿ ಕಲ್ಲನ್ನು ಪರೀಕ್ಷಿಸಿದ ನಂತರ ಅದನ್ನು ಪುನಃ ಪ್ಯಾಕ್ ಮಾಡಿ, ಅವರು ಸಹಿ

ಇರುವ ಚೀಟಿಯನ್ನು ಅಂಟಿಸಿ, ಸೀಲು ಮತ್ತು ಮೊಹರಿನೊಂದಿಗೆ ತನಿಖಾಧಿಕಾರಿಗೆ ಹಸ್ತಾಂತರಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-48 ಪ್ರಾ.ಸಾ.9 ಕಸೂರಿ ಒಡೆಯರ್ ಹಿರಿಯ ವೈಜ್ಞಾನಿಕ ಅಧಿಕಾರಿ , ಪ್ರಾದೇಶಿಕ ವಿಧಿ ವಿಜ್ಞಾನ ಪ್ರಯೋಗಾಲಯ, ಮಂಗಳೂರು ತಮ್ಮ ಸಾಕ್ಷ್ಯದಲ್ಲಿ ದಿಃ 24.05.2024 ರಂದು ಚಿಕ್ಕಮಗಳೂರು ನಗರ ಪೋಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ:77 ಕ್ಕೆ ಸಂಬಂಧಿಸಿದ 7 ಸೀಲು ಮಾಡಿದ ವಸ್ತುಗಳನ್ನು ಅವರ ಠಾಣೆಯ ಪಿ ಸಿ ಗಿರೀಶ್ ಬಿ.ಎನ್ ಚಾಸಾ-23 ರವರ ಮೂಲಕ ಪರೀಕ್ಷೆಗಾಗಿ ಅವರ ಪ್ರಯೋಗಾಲಯಕ್ಕೆ ಕಳುಹಿಸಿದ್ದಾಗಿ, ಸದರಿ ವಸ್ತುಗಳ ಮೇಲೆ ಹಾಕಿದ್ದ ಮೊಹರು ಮುದ್ರೆಯು ಯಥಾಸ್ಥಿತಿಯಲ್ಲಿದ್ದು, ತನಿಖಾಧಿಕಾರಿ ಕಳುಹಿಸಿದ್ದ ಮಾದರಿ ಮುದ್ರೆಯೊಂದಿಗೆ ತಾಳೆ ಮಾಡಿ ಅವುಗಳನು ಬಿ.ಎಸ್.261/2024 ಎಂದು ನಮೂದಿಸಿದ್ದಾಗಿ, ದಿಃ 01.06.2024 ರಂದು ಅವರು ಪರೀಕ್ಷೆಗಾಗಿ ಸದರಿ ವಸ್ತುಗಳನ್ನು ತೆರೆದಿದ್ದಾಗಿ ಮತ್ತು ವಿವರಣೆಯು ಇನ್ವಾಯಿಸ್ ನಲ್ಲಿ ಮಾಡಲಾದ ವಿವರಣೆಗೆ ಅನುಗುಣವಾಗಿದ್ದುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-49 ಪ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರು ಈ ಕೆಳಕಂಡ ವಸ್ತುಗಳನ್ನು ಸ್ವೀಕರಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆಃ- 1). Control swab, 2) Blood stained swab, 3) Blood stained swab, 4) One stone, 5) One nightie, it may be chudidar top also, as it was long, I had named it as nightie 6) One saree and 7) Blood stained swab ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-50 ಪ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರು ಸದರಿ ವಸ್ತುಗಳನ್ನು Benzidine/Phenophthalein ಪರೀಕ್ಷೆಗೆ ಒಳಪಡಿಸಿದ್ದಾಗಿ ಅಲ್ಲದೆ Takayama Crystal ಪರೀಕ್ಷೆ ನಡೆಸುವ ಮೂಲಕ ರಕ್ತದ ಕಲೆಗಳಿರುವ ಬಗ್ಗೆ ದೃಢಪಡಿಸಿಕೊಂಡಿದ್ದಾಗಿ, 2 ರಿಂದ 7 ನೇ ವಸ್ತುಗಳ ಮೇಲೆ ರಕ್ತದ ಕಲೆಗಳು ಇದ್ದುದ್ದಾಗಿ, ಕಲೆಗಳ ಸ್ವರೂಪ ಮತ್ತು ಅವುಗಳ ವಿಸ್ತೀರ್ಣ, ಅಳತೆ ಮತ್ತು ಸ್ಥಳವನ್ನು (extent, size and location) ವರದಿಯಲ್ಲಿ ಉಲ್ಲೇಖಿಸಿದ್ದಾಗಿ ಸಾಕ್ಷ್ಯ

ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-51 ಫ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ರಕ್ತದಿಂದ ಕಲೆಯಾಗಿರುವ ವಸ್ತುಗಳ ಮಾದರಿಯ ಕತ್ತರಿಸಿದ ಭಾಗಗಳು/ಸ್ವಾಪಿಂಗ್ ಗಳನ್ನು ಸಿರಾಲಜಿಕಲ್ ವಿಶ್ಲೇಷಣೆಗೆ ಒಳಪಡಿಸಿದ್ದಾಗಿ ಮತ್ತು GEL ಡಿಫ್ಯೂಷನ್ ವಿಧಾನ, ಕ್ರಾಸ್ ಓವರ್, ಎಲೆಕ್ಟ್ರೋಫೋರೆಸಿಸ್ ಮೂಲಕ absorption elution ವಿಧಾನದಿಂದ ನಿರ್ಧರಿಸಿದ್ದಾಗಿ, 2 ರಿಂದ 7ನೇ ವಸ್ತುಗಳಲ್ಲಿ ಕಂಡುಬಂದ ರಕ್ತದ ಕಲೆಗಳು ಮಾನವನಿಗೆ ಸಂಬಂಧಿಸಿದ್ದು, ಪರೀಕ್ಷೆಯ ಫಲಿತಾಂಶ ಅನಿರ್ಧಿಷ್ಟವಾಗಿರುವುದರಿಂದ ಕಲೆಗಳ ರಕ್ತದ ಗುಂಪು ಸರಿಯಾಗಿ ನಿರ್ಧರಿಸಲಾಗಿಲ್ಲವೆಂದು ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-52 ಫ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆ ಕಾರಣದಿಂದಾಗಿ ಅವರು ದಿಃ20.06.2024 ರಂದು ನಿಪಿ.22 ರಂತೆ ವರದಿಯನ್ನು ತಯಾರಿಸಿ,ದಿಃ 21.06.2024 ರಂದು ಡಿಜಿಟಲ್ ಸಹಿ ಮಾಡಿ FLMS ಮೂಲಕ ತನಿಖಾಧಿಕಾರಿಗೆ ರವಾನಿಸಿದ್ದಾಗಿ, ಪರೀಕ್ಷೆಯ ನಂತರ ಅವರು ಸದರಿ ವಸ್ತುಗಳನ್ನು ಪುನಃ ಪ್ಯಾಕ್ ಇಲಾಖಾ ಮುದ್ರೆಯೊಂದಿಗೆ ಸಂಬಂಧಪಟ್ಟ ಪೋಲೀಸರಿಗೆ ಹಸ್ತಾಂತರಿಸಿದ್ದಾಗಿ ಸಾಕ್ಷ ನುಡಿದಿರುತ್ತಾರೆ ಹಾಗೂ ಮುದ್ದೆಮಾಲು-1 ರಿಂದ 6ರ ಮೇಲೆ ಅಂಟಿಸಿರುವ ಚೀಟಿಗಳಲ್ಲಿ ಬಿ.ಎಸ್.261/2024 ಎಂದು ಬರೆದಿರುವ ಅವರ ಇಲಾಖಾ ಸೀಲನ್ನು ಅವರು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-53 ಫ್ರಾ.ಸಾ.10 ಶುಂಭುಲಿಂಗನಗೌಡ ಪಿ.ಎಸ್.ಐ. ನಗರ ಪೋಲೀಸ್ ಠಾಣೆ ಚಿಕ್ಕಮಗಳೂರು ತಮ್ಮ ಸಾಕ್ಷ್ಯದಲ್ಲಿ ದಿಃ 10-05-2024 ರಂದು ಬೆಳಿಗ್ಗೆ ಸುಮಾರು 6 ಗಂಟೆಗೆ ಅವರು ಠಾಣೆಯಲ್ಲಿದ್ದಾಗ ಹಿಂದಿನ ದಿನ ರಾತ್ರಿ ಠಾಣಾಧಿಕಾರಿಯಾಗಿ ಕರ್ತವ್ಯದಲ್ಲಿದ್ದ ಚಾಸಾ.20- ಪ್ರಮೋದ್ ರವರು ದೂರವಾಣಿ ಮೂಲಕ ಚಿಕ್ಕಮಗಳೂರಿನ ಐ.ಜಿ. ರಸ್ತೆಯಲ್ಲಿರುವ ಸುಪ್ರೀಂ ಮೆಡಿಕಲ್ ಹತ್ತಿರ ಒಬ್ಬ ಮಹಿಳೆಯ ಕೊಲೆಯಾಗಿದೆ ಎಂದು ಮಾಹಿತಿ ಬಂದಿದ್ದಾಗಿ ಅವರಿಗೆ ತಿಳಿಸಿದ ಮೇರೆಗೆ ಅವರು ಅದೇ ದಿನ ಬೆಳಿಗ್ಗೆ 6.30 ಗಂಟೆಗೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದ್ದು, ಅಷ್ಟೊತ್ತಿಗಾಗಲೇ ಶವವನ್ನು ಫ್ರಾಸಾ.2 ಮತ್ತು ಚಾಸಾ.10 ರವರು ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಗೆ ಸಾಗಿಸಿದ್ದ ಬಗ್ಗೆ ಮಾಹಿತಿ ಬಂದಿದ್ದಾಗಿ ನಂತರ ಅವರು ಸದರಿ ಆಸ್ಪತ್ರೆಯ ಶವಗಾರಕ್ಕೆ

ಹೋಗಿ ಶವವನ್ನು ನೋಡಿ ಠಾಣೆಗೆ ಹಿಂದಿರುಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-54 ಫ್ರಾ.ಸಾ.10 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದೇ ದಿನ ಬೆಳಿಗ್ಗೆ 8 ಗಂಟೆ ಸಮಯದಲ್ಲಿ ಕೊಲ್ಲಿಬೈಲಿನ ನಡುವಿನ ಮಡ್ಕಲ್ ವಾಸಿಯಾದ ಮೃತಳ ಮಗನಾದ ಫ್ರಾಸಾ-1 ಸುಮಂತ್ ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರು ನಿಪಿ.1 ನ್ನು ಪಡೆದು ಠಾಣಾ ಮೊಕದ್ದಮೆ ಸಂಖ್ಯೆ: 77/2024 ರಂತೆ ಪ್ರಕರಣ ದಾಖಲಿಸಿ ನಿಪಿ.2 ರಂತೆ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿದ್ದಾಗಿ ನಂತರ ಅದೇ ದಿನ ಪ್ರಕರಣವು ಘೋರ ಅಪರಾಧವನ್ನು ಒಳಗೊಂಡಿದ್ದರಿಂದ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.32-ಜಾನ್ಸನ್ ಡಿಸೋಜ ರವರಿಗೆ ನೀಡಿದ್ದಾಗಿ ಆ ದಿನ ನಾನು ಶವಗಾರದಲ್ಲಿ ನೋಡಿದ ಮಹಿಳೆಯ ಶವವು ನಿಪಿ.3 ಮತ್ತು ನಿಪಿ.4 ರ ಫೋಟೋಗಳಲ್ಲಿ ಕಂಡುಬರುವುದಾಗಿ ನುಡಿದಿರುತ್ತಾರೆ. ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-55 ಫ್ರಾ.ಸಾ.11 ಉಮೇಶ್, ನಗರ ಪೋಲೀಸ್ ಠಾಣೆಯ ಪೇದೆ ತಮ್ಮ ಸಾಕ್ಷ್ಯದಲ್ಲಿ ದಿಃ 10-05-2024 ರಂದು ತನಿಖಾಧಿಕಾರಿಗಳಾದ ಚಾಸಾ.32 ರವರು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರದಲ್ಲಿ ಶವ ತನಿಖೆ ನಡೆಸುವ ಸಮಯದಲ್ಲಿ, ನಿಪಿ.3 ಮತ್ತು ನಿಪಿ.4 ರಂತೆ, ಅದೇ ದಿನ ಚಾಸಾ.32 ರವರು ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿದ ಸಮಯದಲ್ಲಿ ನಿಪಿ.6 ರಂತೆ ಮತ್ತು ಆರೋಪಿಯಾದ ನೀನು ತೋರಿಸಿದಂತೆ ಪಂಚನಾಮೆಯನ್ನು ಜರುಗಿಸುವ ಸಮಯದಲ್ಲಿ ಚಾಸಾ-32 ರವರ ಮೌಖಿಕ ಆದೇಶದ ಮೇರೆಗೆ ನಿಪಿ.12 ಮತ್ತು ನಿಪಿ.13 ರಂತೆ ಫೋಟೋಗಳನ್ನು ತೆಗೆದಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-56 ಫ್ರಾ.ಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ತನಿಖಾಧಿಕಾರಿಗಳ ಆದೇಶದ ಮೇರೆಗೆ ಸದರಿ ಫೋಟೋಗಳನ್ನು ನಿಪಿ.23 ರಂತೆ ಸಿಡಿಗೆ ಯಥಾಸ್ಥಿತಿಯಲ್ಲಿ ವರ್ಗಾಯಿಸಿದ್ದಾಗಿ, ನಂತರ ಅದೇ ದಿನ ಆ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮ 63(4)(ಸಿ) ರಡಿಯಲ್ಲಿ ನಿಪಿ.24 ರಂತೆ ದೃಢೀಕರಣ ಪತ್ರವನ್ನು ತಯಾರಿಸಿ

ನೀಡಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-57 ಫ್ರಾ.ಸಾ.12 ಪ್ರದೀಪ್, ನಗರ ಪೋಲೀಸ್ ಠಾಣೆಯ ಪೇದೆ ತಮ್ಮ ಸಾಕ್ಷದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 08-07-2024 ರಂದು ತನಿಖಾಧಿಕಾರಿಗಳಾದ ಚಾಸಾ.33-ರೇಣುಕಾ ಪ್ರಸಾದ್, ಪಿಐ ರವರು ಎಫ್.ಎಲ್.ಎಂ.ಎಸ್ ತಂತ್ರಾಂಶದಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದ ಎಫ್.ಎಸ್.ಎಲ್ ವರದಿಯನ್ನು ಡೌನ್ ಲೋಡ್ ಮಾಡಿಕೊಡುವಂತೆ ಸೂಚಿಸಿದ ಮೇರೆಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರ್.ಎಫ್.ಎಸ್.ಎಲ್ ಮಂಗಳೂರಿನಿಂದ ಬಂದಿದ್ದ ವರದಿಯನ್ನು ನಿಪಿ-22 ರಂತೆ ಮತ್ತು ಪತ್ರವನ್ನು ನಿಪಿ-26 ರಂತೆ ಪ್ರಿಂಟ್ ತೆಗೆದು ತನಿಖಾಧಿಕಾರಿಗೆ ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-58 ಫ್ರಾ.ಸಾ.12 ರವರು ತಮ್ಮ ಸಾಕ್ಷದಲ್ಲಿ ಮುಂದುವರಿದು ಅದೇ ದಿನ ಚಾಸಾ-33 ರವರಿಗೆ ಭಾರತೀಯ ಸಾಕ್ಷ್ಯ ಅಧಿನಿಯಮದಡಿಯಲ್ಲಿ ನಿಪಿ-25 ರಂತೆ ದೃಢೀಕರಣ ಪತ್ರವನ್ನು ತಯಾರಿಸಿ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-59 ಫ್ರಾ.ಸಾ.13 ಜಾನ್ಸನ್ ಕಿರಣ್ ಡಿಸೋಜ, ಚಿಕ್ಕಮಗಳೂರು ನಗರ ಪೋಲೀಸ್ ಠಾಣೆಯಲ್ಲಿ ಆಗ್ಗೆ ಪ್ರಭಾರ ಆರಕ್ಷಕ ನಿರೀಕ್ಷಕರಾಗಿದ್ದ ಅವರು ತಮ್ಮ ಸಾಕ್ಷದಲ್ಲಿ ದಿಃ 10-05-2024 ರಂದು ಈ ಪ್ರಕರಣದ ಕಡತವನ್ನು ಫ್ರಾಸಾ.10-ಶಂಭುಲಿಂಗನಗೌಡ ರವರಿಂದ ಪಡೆದು ಪರಿಶೀಲಿಸಿ, ಮುಂದಿನ ತನಿಖೆಯನ್ನು ಕೈಗೊಂಡಿದ್ದಾಗಿ, ಅದೇ ದಿನ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಭೇಟಿ ನೀಡಿ, ಪಂಚರಾದ ಚಾಸಾ.2, ಚಾಸಾ.3 ಮತ್ತು ಫ್ರಾಸಾ.4 ರವರಿಗೆ ನಿಪಿ.9 ರಂತೆ ನೋಟೀಸನ್ನು ಜಾರಿ ಮಾಡಿ ಪಂಚರನ್ನಾಗಿ ಬರಮಾಡಿಕೊಂಡು, ಅವರ ಸಮಕ್ಷಮ ಶವಗಾರದಲ್ಲಿ ಇರಿಸಿದ್ದ ಶ್ರೀಮತಿ ಕನಕ ಕೋಂ ಲೇಟ್ ದೇವರಾಜ್ ರವರ ಶವ ತನಿಖೆಯನ್ನು ಬೆಳಿಗ್ಗೆ 9 ಗಂಟೆಯಿಂದ 11.30 ಗಂಟೆಯವರೆಗೆ ನಡೆಸಿ, ನಿಪಿ.8 ರಂತೆ ಶವ ಪಂಚನಾಮೆಯನ್ನು ಜರುಗಿಸಿದ್ದಾಗಿ, ಶವತನಿಖಾ ಕಾಲಕ್ಕೆ ಮೃತಳ ಮೈಮೇಲೆ ಕಂಡುಬಂದಂತಹ ಗಾಯಗಳು ಮತ್ತು ಬಟ್ಟೆಗಳ

ವಿವರಗಳನ್ನು ಶವ ತನಿಖಾ ವರದಿಯಲ್ಲಿ ನಮೂದು ಮಾಡಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-60 ಫ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಶವ ತನಿಖಾ ಕಾಲಕ್ಕೆ ಮೃತಳ ರಕ್ತ ಸಂಬಂಧಿಕರಾದ ಚಾಸಾ.3 ಮತ್ತು ಫ್ರಾಸಾ.4 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದಾಗಿ, ಫ್ರಾಸಾ.11 ರವರು ಅವರ ಆದೇಶದ ಮೇರೆಗೆ ನಿಪಿ.3 ಮತ್ತು ನಿಪಿ.4 ರಂತೆ ಫೋಟೋಗಳನ್ನು ತೆಗೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-61 ಫ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಶವ ಪರೀಕ್ಷೆಯ ನಂತರ ಮೃತಳ ಮರಣೋತ್ತರ ಪರೀಕ್ಷೆಯನ್ನು ನಡೆಸುವಂತೆ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಮನವಿಯನ್ನು ನಿಪಿ.18 ರಂತೆ ಫಾರಂ 146 ರೊಂದಿಗೆ ಸಲ್ಲಿಸಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-62 ಫ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮೃತಳ ಮೈಮೇಲೆ ಕಿತ್ತಲೆ ಬಣ್ಣದ ನೀಲಿ ಬಣ್ಣದ ಹೂವುಗಳ ಡಿಸೈನ್ ಇರುವ ಟಾಪ್, ನೀಲಿ ಬಣ್ಣದ ಸೀರೆ, ಕುತ್ತಿಗೆಯಲ್ಲಿ ಕಂದುಬಣ್ಣದ ವೇಲ್ ಮತ್ತು ಎರಡು ಕಾಲುಗಳಲ್ಲಿದ್ದ ಬೆಳ್ಳಿಯಂತಹ ಕಾಲುಂಗರಗಳು ಇದ್ದುದ್ದಾಗಿ, ಅವುಗಳನ್ನು ಮರಣೋತ್ತರ ಪರೀಕ್ಷಾ ಕಾಲಕ್ಕೆ ಸಂಗ್ರಹಿಸಿ ಕೊಡುವಂತೆ ವೈದ್ಯರಿಗೆ ನೀಡಿದ ಮನವಿಯಲ್ಲಿ ಕೋರಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-63 ಫ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದೇ ದಿನ ಚಿಕ್ಕಮಗಳೂರು ನಗರದ ಐ.ಜಿ.ರಸ್ತೆಯಲ್ಲಿರುವ ಸುಪ್ರೀಂ ಮೆಡಿಕಲ್ ಹತ್ತಿರ ಕೃತ್ಯ ನಡೆದಿದ್ದ ಸ್ಥಳಕ್ಕೆ ಭೇಟಿ ನೀಡಿ, ಫ್ರಾಸಾ.3 ಮತ್ತು 7 ರವರಿಗೆ ನಿಪಿ.7 ರಂತೆ ನೋಟೀಸನ್ನು ಜಾರಿ ಮಾಡಿ ಪಂಚರನ್ನಾಗಿ ಬರಮಾಡಿಕೊಂಡಿದ್ದಾಗಿ, ಸದರಿ ಸ್ಥಳಕ್ಕೆ ವಿಧಿ ವಿಜ್ಞಾನ ಪ್ರಯೋಗಾಲಯದ ಸೀನ್ ಆಫ್ ಕ್ರೈಂ ಅಧಿಕಾರಿಗಳನ್ನು

ಬರಮಾಡಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-64 ಫ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಫ್ರಾಸಾ.1 ರವರು ಹಾಜರಿದ್ದ ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಪಂಚರ ಸಮಕ್ಷಮ ಸ್ಥಳ ಪರಿಶೀಲಿಸಿ, ಸೋಕೋ ಅಧಿಕಾರಿಗಳು ಪಂಚರ ಸಮಕ್ಷಮ ಸ್ಥಳದಲ್ಲಿ ಕೃತ್ಯಕ್ಕೆ ಸಂಬಂಧಿಸಿದ ರಕ್ತದ ನಿಶಾನೆಗಳನ್ನು, ಒಂದು ಕಂಟ್ರೋಲ್ ಸ್ವಾಬ್‌ನ್ನು ಸಂಗ್ರಹಿಸಿ ನೀಡಿದ್ದಾಗಿ, ಅವುಗಳನ್ನು ಅವರು ಅಮಾನತು ಪಡಿಸಿಕೊಂಡಿದ್ದಾಗಿ, ಆ ಬಗ್ಗೆ ಮಧ್ಯಾಹ್ನ 12.30 ರಿಂದ 1.30 ಗಂಟೆಯವರೆಗೆ ನಿಪಿ.5 ರಂತೆ ಪಂಚನಾಮೆಯನ್ನು ಜರುಗಿಸಿದ್ದಾಗಿ, ಸದರಿ ಪಂಚನಾಮೆಯ ಸಮಯದಲ್ಲಿ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿದ್ದಾಗಿ ಮತ್ತು ನಿಪಿ.6 ರಂತೆ ಫೋಟೋವನ್ನು ತೆಗೆಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-65 ಫ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮೇಲೆ ಹೇಳಿದಂತೆ ಅಮಾನತು ಪಡಿಸಿಕೊಂಡ ವಸ್ತುಗಳನ್ನು ನಿಪಿ.27 ರಂತೆ ಠಾಣಾ ಮಾಲುಪಟ್ಟಿ ಸಂಖ್ಯೆ 64/2024 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಹಾಗೂ ಸಾದಾ ಬ್ಯಾಂಡೇಜ್ ಹತ್ತಿಯ ಬಟ್ಟೆ, ರಕ್ತವನ್ನು ಸಂಗ್ರಹಿಸಿದ ಎರಡು ಬ್ಯಾಂಡೇಜ್ ಹತ್ತಿಯ ಬಟ್ಟೆಗಳ ಮುದ್ದೆಮಾಲು-1 ರಿಂದ 3 ಎಂದು ಗುರುತಿಸಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-66 ಫ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದೇ ದಿನ ಆರೋಪಿಯ ಪತ್ತೆಗಾಗಿ ಚಾಸಾ.24 ರಿಂದ ಚಾಸಾ.26 ರವರನ್ನು ನೇಮಿಸಿದ ಮೇರೆಗೆ ಅದೇ ದಿನ ಆರೋಪಿಯಾದ ನಿನ್ನನ್ನು ಚಿಕ್ಕಮಗಳೂರು ನಗರದ ರಾಮನಹಳ್ಳಿ ಬಸ್ ನಿಲ್ದಾಣದ ಹತ್ತಿರ ಮಧ್ಯಾಹ್ನ 1.45 ಗಂಟೆಗೆ ವಶಕ್ಕೆ ಪಡೆದಿದ್ದಾಗಿ, ಆತನನ್ನು ಮಧ್ಯಾಹ್ನ 2 ಗಂಟೆಗೆ ಅವರ ಮುಂದೆ ಹಾಜರುಪಡಿಸಿದ್ದಾಗಿ, ಆ ಬಗ್ಗೆ ಚಾಸಾ.24 ರವರು ನಿಪಿ.28 ರಂತೆ ವರದಿಯನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-67 ಫ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಅವರು ದಸ್ತಗಿರಿ ಕ್ರಮ ಅನುಸರಿಸಿ ಆರೋಪಿಯಾದ ನಿನ್ನನ್ನು ಬಂಧಿಸಿ, ನಿಪಿ.29 ರಂತೆ ನಿನ್ನ ಸ್ವಇಚ್ಛಾ ಹೇಳಿಕೆಯನ್ನು ಪಡೆದಿದ್ದಾಗಿ ಸದರಿ ಹೇಳಿಕೆಯಲ್ಲಿ 'ತಾವು ನನ್ನ ಜೊತೆ ಬಂದರೆ ನಾನು ಹೆಂಗಸನ್ನು ಕೊಲೆ ಮಾಡಿದ ಸ್ಥಳವನ್ನು ಮತ್ತು ಕೃತ್ಯಕ್ಕೆ ಉಪಯೋಗಿಸಿದ ವಸ್ತುವನ್ನು ತೋರಿಸುತ್ತೇನೆ' ಎಂದು ತಿಳಿಸಿದ ಮೇರೆಗೆ ಪಂಚನಾಮೆ ಕ್ರಮವನ್ನು ಜರುಗಿಸಲು ಚಾಸಾ.7 ಮತ್ತು ಫ್ರಾಸಾ.5 ರವರಿಗೆ ನಿಪಿ.10 ರಂತೆ ನೋಟೀಸನ್ನು ಜಾರಿ ಮಾಡಿ ಪಂಚರನ್ನಾಗಿ ಠಾಣೆಗೆ ಬರಮಾಡಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-68 ಫ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಆರೋಪಿಯಾದ ನೀನು ಅವರನ್ನು ಮತ್ತು ಮೇಲೆ ಹೇಳಿದ ಪಂಚರನ್ನು ಚಿಕ್ಕಮಗಳೂರು ನಗರದ ಐ.ಜಿ.ರಸ್ತೆಯಲ್ಲಿರುವ ಸುಪ್ರೀಂ ಮೆಡಿಕಲ್ ಹತ್ತಿರಕ್ಕೆ ಕರೆದುಕೊಂಡು ಹೋಗಿ ಸದರಿ ಸ್ಥಳದಲ್ಲಿ ಹಿಂದಿನ ದಿನ ಅಂದರೆ ಅದೇ ದಿನ ಬೆಳಗಿನ ಜಾವ 2.30 ಗಂಟೆ ಸಮಯದಲ್ಲಿ ರಸ್ತೆ ಬದಿಯಲ್ಲಿ ಮಲಗಿದ್ದ ಹೆಂಗಸಿನ ತಲೆಗೆ ಕಲ್ಲಿನಿಂದ ಜಜ್ಜಿ ಕೊಲೆ ಮಾಡಿದ ಸ್ಥಳ ಅದೇ ಎಂದು ತೋರಿಸಿದ ಮೇರೆಗೆ ಸದರಿ ಪಂಚರ ಸಮಕ್ಷಮ ಆರೋಪಿಯಾದ ನೀನು ಸದರಿ ಸ್ಥಳದಲ್ಲಿ ಬಿದ್ದಿದ್ದ ಕೆಲವು ಪ್ಲಾಸ್ಟಿಕ್ ಚೀಲಗಳು ಮತ್ತು ಬಟ್ಟೆಗಳನ್ನು ಸರಿಸಿ ಅಲ್ಲಿ ಇಟ್ಟಿದ್ದ ಒಂದು ಸ್ಪೈಜ್ ಕಲ್ಲನ್ನು ತೋರಿಸಿ ಅದೇ ಕಲ್ಲಿನಿಂದ ನೀನು ಮಹಿಳೆಯ ತಲೆಗೆ ಜಜ್ಜಿ ಕೊಲೆ ಮಾಡಿದ್ದಾಗಿ, ನಂತರ ಅದನ್ನು ಯಾರಿಗೂ ಕಾಣದಂತೆ ಅಲ್ಲಿ ಮುಚ್ಚಿಟ್ಟಿದ್ದಾಗಿ ನುಡಿದು ಹಾಜರುಪಡಿಸಿದ್ದಾಗಿ, ಸದರಿ ಕಲ್ಲನ್ನು ಪಂಚರ ಸಮಕ್ಷಮ ಪರಿಶೀಲಿಸಲಾಗಿ ಅದು 5 ವರೆ ಇಂಚು ಎತ್ತರ, 9 ಇಂಚು ಉದ್ದ ಮತ್ತು 7 ವರೆ ಇಂಚು ಅಗಲ ಇರುವ ಮನೆ ಕಟ್ಟಲು ಉಪಯೋಗಿಸುವ 17 ಕೆ.ಜಿ ತೂಕ ಸ್ಪೈಜ್ ಕಲ್ಲು ಆಗಿದ್ದಾಗಿ, ಅದರ ಮೇಲೆ ಅಲ್ಲಲ್ಲಿ ರಕ್ತದ ಕಲೆಗಳು ಇರುವುದು ಕಂಡುಬಂದಿದ್ದಾಗಿ, ಸದರಿ ಕಲ್ಲನ್ನು ಪಂಚರ ಸಮಕ್ಷಮ ಮಧ್ಯಾಹ್ನ 3.30 ರಿಂದ 4.30 ಗಂಟೆಯವರೆಗೆ ನಿಪಿ.11 ರಂತೆ ಪಂಚನಾಮೆಯಡಿ ಅಮಾನತು ಪಡಿಸಿಕೊಂಡಿದ್ದಾಗಿ, ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿದ್ದಾಗಿ ಮತ್ತು ನಿಪಿ.12 ಮತ್ತು ಪಿ.13 ರಂತೆ ಫೋಟೋಗಳನ್ನು ತೆಗೆಸಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-69 ಫ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಿಪಿ.12 ಮತ್ತು ನಿಪಿ.13 ರಂತೆ ಫೋಟೋಗಳಲ್ಲಿ ನಿನ್ನ ಇರುವಿಕೆ ಕಂಡುಬರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-70 ಫ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಿಪಿ.12 ಮತ್ತು ನಿಪಿ.13 ರಂತೆ ಫೋಟೋಗಳಲ್ಲಿ ನಿನ್ನ ಇರುವಿಕೆ ಕಂಡುಬರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-71 ಫ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಸದರಿ ಫೋಟೋಗಳಲ್ಲಿ ನೀನು ತೋರಿಸಿ ಹಾಜರುಪಡಿಸಿದ ಕಲ್ಲು ಕಂಡುಬರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-72 ಫ್ರಾ.ಸಾ.13 ಇವರು ತಮ್ಮ ಸಾಕ್ಷದಲ್ಲಿ ಮುಂದುವರಿದು ಅಮಾನತು ಪಡಿಸಿಕೊಂಡ ಸದರಿ ಕಲ್ಲನು ನಿಪಿ.30 ರಂತೆ ಠಾಣಾ ಮಾಲುಪಟ್ಟಿ ಸಂಖ್ಯೆಃ 65/2024 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿದ್ದಾಗಿ, ನಂತರ ಅದೇ ದಿನ ಚಾಸಾ.24 ರಿಂದ 26 ರವರ ಹೇಳಿಕೆಗಳನು ಪಡೆದುಕೊಂಡಿದ್ದಾಗಿ, ನಂತರ ಆರೋಪಿಯಾದ ನಿನ್ನನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಸಿಬ್ಬಂದಿ ಮೂಲಕ ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-73 ಫ್ರಾ.ಸಾ.13 ಇವರು ತಮ್ಮ ಸಾಕ್ಷದಲ್ಲಿ ಮುಂದುವರಿದು ದಿಃ 11.05.2024 ರಂದು ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಫ್ರಾಸಾ.2-ಉಮೇಶ ಮತ್ತು ಚಾಸಾ.10-ರವಿಕುಮಾರ್ ರವರ ಹೇಳಿಕೆಗಳನು ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-74 ಫ್ವಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ13-05-2024 ರಂದು ಚಿಕ್ಕಮಗಳೂರು ನಗರಸಭೆಗೆ ನಿಪಿ.31 ರಂತೆ ಮನವಿಯನ್ನು ಸಲ್ಲಿಸಿ ಕೃತ್ಯ ನಡೆದ ಸ್ಥಳದ ಬಗ್ಗೆ ದಾಖಲೆಗಳನ್ನು ನೀಡುವಂತೆ ಕೋರಿದ್ದಾಗಿ, ಅದೇ ದಿನ ಚಿಕ್ಕಮಗಳೂರು ಲೋಕೋಪಯೋಗಿ ಇಲಾಖೆಗೆ ನಿಪಿ.15 ರಂತೆ ಮನವಿಯನ್ನು ಸಲ್ಲಿಸಿ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿ ಕೊಡುವಂತೆ ಕೋರಿದ್ದಾಗಿ, ಅದೇ ದಿನ ಚಿಕ್ಕಮಗಳೂರು ಮೆಸ್ಕಾಂ ಸಹಾಯಕ ಕಾರ್ಯಪಾಲಕ ಅಭಿಯಂತರಿಗೆ ನಿಪಿ.32 ರಂತೆ ಮನವಿಯನ್ನು ಸಲ್ಲಿಸಿ ದಿಃ 10-05-2024 ರಂದು ಬೆಳಗಿನ ಜಾವ 2 ರಿಂದ 3 ಗಂಟೆ ವೇಳೆಯಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಮಾಹಿತಿಯನ್ನು ನೀಡುವಂತೆ ಕೋರಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-75 ಫ್ವಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಅದೇ ದಿನ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ನಿಪಿ.33 ರಂತೆ ಮನವಿಯನ್ನು ಸಲ್ಲಿಸಿ ಮೃತಳ ಮರಣೋತ್ತರ ಪರೀಕ್ಷಾ ವರದಿಯನ್ನು ನೀಡುವಂತೆ ಕೋರಿದ್ದಾಗಿ, ಮೃತಳ ಮರಣೋತ್ತರ ಪರೀಕ್ಷಾ ಸಮಯದಲ್ಲಿ ವೈದ್ಯರು ಸಂಗ್ರಹಿಸಿ ನೀಡಿದ್ದ ಮೃತಳ ಮೈಮೇಲೆ ಇದ್ದ ಸೀಲ್ ಮಾಡಿದ ಸ್ಥಿತಿಯಲ್ಲಿದ್ದ ಬಟ್ಟೆಗಳು ಮತ್ತು ಗಾಸ್ ಪೀಸಿನಲ್ಲಿ ಸಂಗ್ರಹಿಸಿದ್ದ ಮೃತಳ ರಕ್ತವನ್ನು ದಿಃ 20-05-2024 ರಂದು ಚಾಸಾ.22 ರವರು ತಂದು ಅವರ ಮುಂದೆ ಹಾಜರುಪಡಿಸಿದ ಮೇರೆಗೆ ಅವುಗಳನ್ನು ಸ್ವೀಕರಿಸಿ ನಿಪಿ.34 ರಂತೆ ಠಾಣಾ ಮಾಲು ಪಟ್ಟಿ ಸಂಖ್ಯೆ 72/2024 ರಲ್ಲಿ ಅಳವಡಿಸಿಕೊಂಡಿದ್ದಾಗಿ, ಮೃತಳ ಮೈಮೇಲೆ ಇದ್ದ ಬಟ್ಟೆಗಳು ಮುದ್ದೆಮಾಲು 4 ಮತ್ತು 5 ನ್ನು ಶವ ತನಿಖಾ ಕಾಲಕ್ಕೆ ಅವರು ನೋಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-76 ಫ್ವಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಈ ಪ್ರಕರಣದಲ್ಲಿ ಅಮಾನತುಪಡಿಸಿಕೊಳ್ಳಲಾಗಿದ್ದ 7 ವಸ್ತುಗಳನ್ನು ತಜ್ಞರ ಪರೀಕ್ಷೆಗಾಗಿ ಆರ್.ಎಫ್.ಎಸ್.ಎಲ್. ಮಂಗಳೂರುರವರಿಗೆ ಚಾಸಾ.23 ರವರೊಂದಿಗೆ ದಿಃ 21.05.2024 ರಂದು ಮನವಿ ಪತ್ರದೊಂದಿಗೆ ಕಳುಹಿಸಿಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-77 ಫಿ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 10.05.2024 ರಂದು ಚಾಸಾ.20-ಪ್ರಮೋದ್ ರವರು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಮೃತಳ ಶವವನ್ನು ಮುಂದಿನ ಕ್ರಮ ಜರುಗಿಸುವವರೆಗೆ ಶವಗಾರದಲ್ಲಿಡಲು ಅನುಮತಿ ಕೋರಿ ನಿಪಿ.35 ರಂತೆ ಮನವಿಯನ್ನು ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-78 ಫಿ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಅವರಿಗೆ ದಿಃ 22.05.2024 ರಂದು ಚಾಸಾ.33-ರೇಣುಕ ಪ್ರಸಾದ್ ಎಸ್ ರವರಿಗೆ ವಹಿಸಿಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-79 ಫಿ್ರಾ.ಸಾ.14 ಪ್ರಶಾಂತ್, ಚಿಕ್ಕಮಗಳೂರು ಮೆಸ್ಕಾಂ ಇಲಾಖೆಯ ಕಾರ್ಯ ಮತ್ತು ಪಾಲನಾ ಶಾಖೆಯ ಸಹಾಯಕ ಇಂಜಿನಿಯರ್ ತಮ್ಮ ಸಾಕ್ಷ್ಯದಲ್ಲಿ ದಿಃ 13-05-2024 ರಂದು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು ಅವರ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರಿಗೆ ನಿಪಿ.32 ರಂತೆ ಮನವಿಯನ್ನು ಸಲ್ಲಿಸಿ, ಸದರಿ ಠಾಣೆಯ ಮೊಕದ್ದಮೆ ಸಂಖ್ಯೆ 77/2024 ಕ್ಕೆ ಸಂಬಂಧಿಸಿದಂತೆ ಚಿಕ್ಕಮಗಳೂರಿನ ಐ.ಜಿ. ರಸ್ತೆಯಲ್ಲಿರುವ ಸುಪ್ರೀಂ ಮೆಡಿಕಲ್ ಮತ್ತು ಭಾರತ್‌ಮಾತಾ ಕಾಫಿ ವರ್ಕ್ಸ್ ಮುಂಭಾಗ ಫುಟಪಾತ್ ರಸ್ತೆ ಮತ್ತು ಅದಕ್ಕೆ ಹೊಂದಿಕೊಂಡಿರುವ ಐ.ಜಿ ರಸ್ತೆಯಲ್ಲಿ ದಿಃ 10-05-2024 ರ ಬೆಳಗಿನ ಜಾವ 2 ರಿಂದ 3 ಗಂಟೆಯ ಅವಧಿಯಲ್ಲಿ ವಿದ್ಯುತ್ ಸರಬರಾಜು ಆಗುತ್ತಿತ್ತೆ ಎಂದು ಮಾಹಿತಿ ನೀಡಲು ಕೋರಿದ ಮೇರೆಗೆ, ಅವರು ಜೈಲ್ ರೋಡ್ ಫೀಡರ್ ಉಪ ಶಾಖೆಯಲ್ಲಿ ನಿರ್ವಹಿಸಲಾಗಿರುವ ಲಾಗ್ ಪುಸ್ತಕದ ಎಕ್ಸ್‌ಟ್ರಾಕ್ಟ್ ನಿಪಿ.37 ನ್ನು ಪಡೆದು ಪರಿಶೀಲಿಸಿ ಅದರ ಮೇರೆಗೆ ಸದರಿ ಸ್ಥಳದಲ್ಲಿ ಸದರಿ ವೇಳೆಯಲ್ಲಿ ವಿದ್ಯುತ್ ಚಾಲನೆ ಇದ್ದ ಬಗ್ಗೆ ಅವರು ದಿಃ 15.05.2024 ರಂದು ಪೊಲೀಸರಿಗೆ ನಿಪಿ.36 ರಂತೆ ವರದಿಯನ್ನು ಸಲ್ಲಿಸಿದ್ದು, ಸಂಬಂಧಿಸಿದ ಪೊಲೀಸರು ದಿಃ 06.07.2024 ರಂದು ಅವರ ಕಛೇರಿಯಿಂದ ಪಡೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-80 ಫ್ರಾ.ಸಾ.15 ರೇಣುಕ ಪ್ರಸಾದ್, ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು ತಮ್ಮ ಸಾಕ್ಷ್ಯದಲ್ಲಿ ದಿಃ 22.05.2024 ರಂದು ಈ ಪ್ರಕರಣದ ಕಡತವನ್ನು ಫ್ರಾಸಾ.13 ರವರಿಂದ ಪಡೆದು ದಿಃ 22-06-2024 ರಂದು ಚಿಕ್ಕಮಗಳೂರಿನ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿ ಫ್ರಾಸಾ.1, ಫ್ರಾಸಾ.2 ಮತ್ತು ಚಾಸಾ.10 ರವರ ಹೇಳಿಕೆಗಳನ್ನು ಸಿ.ಆರ್.ಪಿ.ಸಿ. ಕಲಂ 164 ರಡಿಯಲ್ಲಿ ದಾಖಲಿಸಿಕೊಡುವಂತೆ ಕೋರಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-81 ಫ್ರಾ.ಸಾ.15 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 06.07.2024 ರಂದು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಿಂದ ಮೃತ ಕನಕರವರ ಮರಣೋತ್ತರ ಪರೀಕ್ಷಾ ವರದಿಯನ್ನು ನಿಪಿ.19 ರಂತೆ ಪಡೆದುಕೊಂಡಿದ್ದಾಗಿ, ಅದೇ ದಿನ ಚಾಸಾ.15 ರವರಿಂದ ಕೃತ್ಯ ನಡೆದ ಸ್ಥಳದ ಬಗ್ಗೆ ನಿಪಿ.14 ರಂತೆ ವರದಿಯನ್ನು ಪಡೆದುಕೊಂಡಿದ್ದಾಗಿ, ಅದೇ ದಿನ ಕೃತ್ಯ ನಡೆದ ಸ್ಥಳ ಮತ್ತು ಸಮಯದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಫ್ರಾಸಾ.14 ರವರಿಂದ ನಿಪಿ.36 ರಂತೆ ವರದಿಯನ್ನು ಪಡೆದುಕೊಂಡಿದ್ದಾಗಿ, ಅದೇ ದಿನ ಫ್ರಾಸಾ.6 ರವರು ತಯಾರಿಸಿಕೊಟ್ಟ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ನಿಪಿ.17 ರಂತೆ ಪಡೆದುಕೊಂಡಿದ್ದಾಗಿ, ಅದೇ ದಿನ ಚಿಕ್ಕಮಗಳೂರು ನ್ಯಾಯಾಧೀಶರು ಸಿ.ಆರ್.ಪಿ.ಸಿ. ಕಲಂ 164 ರಡಿಯಲ್ಲಿ ದಾಖಲಿಸಿದ್ದ ಫ್ರಾಸಾ.1, ಫ್ರಾಸಾ.2 ಮತ್ತು ಚಾಸಾ.10 ರವರ ಹೇಳಿಕೆಗಳನ್ನು ನಿಪಿ.38 ರಿಂದ ನಿಪಿ.40 ರಂತೆ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-82 ಫ್ರಾ.ಸಾ.15 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ತನಿಖೆಯಲ್ಲಿ ಆರೋಪಿಯಾದ ನಿನ್ನ ವಿರುದ್ಧ ಆರೋಪ ಸಾಬೀತಾಗಿದರಿಂದ ಎಫ್.ಎಸ್.ಎಲ್. ವರದಿ ಮತ್ತು ಆಯುಧವನ್ನು ವೈದ್ಯರಿಂದ ಪರಿಶೀಲಿಸಿ ಅವರ ಅಭಿಪ್ರಾಯ ವರದಿಯನ್ನು ಬಾಕಿ ಇರಿಸಿ ದಿಃ 06-07-2024 ರಂದು ನಿನ್ನ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-83 ಫ್ರಾ.ಸಾ.15 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ದಿಃ 08.07.2024 ರಂದು ಮಂಗಳೂರಿನ ಆರ್.ಎಫ್.ಎಸ್.ಎಲ್. ನಿಂದ ಫ್ರಾಸಾ.9 ರವರು ನಿಪಿ.22 ರಂತೆ ನೀಡಿದ ವರದಿ ಮತ್ತು ಸ್ವೀಕೃತಿಯನ್ನು ಪಡೆದುಕೊಂಡಿದ್ದಾಗಿ, ಅದೇ ದಿನ ಫ್ರಾಸಾ.11 ಮತ್ತು ಫ್ರಾಸಾ.12 ರವರಿಂದ ನಿಪಿ.24 ಮತ್ತು ನಿಪಿ.25 ರಂತೆ ಭಾರತೀಯ ಸಾಕ್ಷ್ಯ ಅಧಿನಿಯಮ 65(ಬಿ) ಅಡಿಯಲ್ಲಿ ದೃಢೀಕರಣ ಪತ್ರಗಳನ್ನು ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-84 ಫ್ರಾ.ಸಾ.15 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 22-07-2024 ರಂದು ಚಾಸಾ.11 ರವರ ಹೇಳಿಕೆ, ಫ್ರಾಸಾ.2 ಮತ್ತು ಚಾಸಾ.10 ರವರ ಮುಂದುವರೆದ ಹೇಳಿಕೆಗಳನ್ನು ಪಡೆದಿದ್ದಾಗಿ, ದಿಃ 25.07.2024 ರಂದು ಚಾಸಾ.20 ಮತ್ತು ನಿಪಿ.21 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-85 ಫ್ರಾ.ಸಾ.16 ಹರೀಶ್, ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯ ಆಗಿನ ಆರಕ್ಷಕ ಉಪನಿರೀಕ್ಷಕರು ತಮ್ಮ ಸಾಕ್ಷ್ಯದಲ್ಲಿ ದಿಃ 10.05.2024 ರಂದು ಫ್ರಾಸಾ.13 ರವರು ಅವರನ್ನು, ಚಾಸಾ.25-ನಂಜಪ್ಪ ಹೆಚ್.ಎಸ್ ಮತ್ತು ಚಾಸಾ.26-ಪ್ರದೀಪ್ ಹೆಚ್.ಎಸ್ ರವರನ್ನು ಸದರಿ ಠಾಣೆಯ ಮೊ.ಸಂಃ 77/2024 ರ ಆರೋಪಿಯಾದ ನಿನ್ನ ಪತ್ತೆಗಾಗಿ ವಿಶೇಷ ಕರ್ತವ್ಯಕ್ಕೆ ನೇಮಿಸಿ ನಿಪಿ.41 ರಂತೆ ಜ್ಞಾಪನವನ್ನು ನೀಡಿದ ಮೇರೆಗೆ ಅವರು ಅದೇ ದಿನ ಬೆಳಿಗ್ಗೆ 8 ಗಂಟೆಗೆ ಠಾಣೆಯಿಂದ ಹೊರಟು ಚಿಕ್ಕಮಗಳೂರಿನ ಬಸವನಹಳ್ಳಿ, ಕೆಂಪನಹಳ್ಳಿ ಮತ್ತು ರಾಮನಹಳ್ಳಿ ಕಡೆಗಳಲ್ಲಿ ನಿನ್ನ ಪತ್ತೆಗಾಗಿ ಸಂಚರಿಸುತ್ತಿದ್ದಾಗ ಬಾತ್ಮೀದಾರರಿಂದ ಮಾಹಿತಿ ಬಂದ ಮೇರೆಗೆ ಅವರು ಮಧ್ಯಾಹ್ನ 1.45 ಗಂಟೆಗೆ ರಾಮನಹಳ್ಳಿ ಬಸ್ ನಿಲ್ದಾಣದ ಹತ್ತಿರ ಹೋಗಿ ನೋಡಲಾಗಿ ನೀನು ಬಸ್ ನಿಲ್ದಾಣದ ಬಳಿ ನಿಂತಿದ್ದ ನಿನ್ನನ್ನು ಅವರು ಸಿಬ್ಬಂದಿಗಳ ಸಹಾಯದಿಂದ ವಶಕ್ಕೆ ಪಡೆದು ವಿಚಾರಿಸಿದಾಗ ನೀನು ತನ್ನ ಹೆಸರು ಎಸ್.ಆರ್.ಪೂರ್ಣೇಶ್ ಕುಮಾರ ಎಂದು ನಿನ್ನ ತಂದೆಯ ಹೆಸರು ಮತ್ತು ವಿಳಾಸವನ್ನು ತಿಳಿಸಿದ ಮೇರೆಗೆ ಅವರು ಅದೇ ದಿನ ಬೆಳಗಿನ ಜಾವ 2.30 ಗಂಟೆ ಸಮಯದಲ್ಲಿ ಚಿಕ್ಕಮಗಳೂರು ಐ.ಜಿ. ರಸ್ತೆಯಲ್ಲಿರುವ ಸುಪ್ರೀಂ ಮೆಡಿಕಲ್ಸ್ ಹತ್ತಿರ ಬಿಕ್ಷಾಟನೆ ಮಾಡಿ

ಫುಟಪಾತ್ ರಸ್ತೆಯ ಬಳಿ ಮಲಗಿದ್ದ ಮಹಿಳೆಯೊಬ್ಬರಿಗೆ ನಿನ್ನ ಕಾಲನ್ನು ಒತ್ತುವಂತೆ ಕೇಳಿದಾಗ ಆಕೆ ಕಾಲು ಒತ್ತಲು ನಿರಾಕರಿಸಿದ್ದರಿಂದ ನೀನು ಕೋಪಗೊಂಡು ಆಕೆಯ ತಲೆಯ ಮೇಲೆ ಸ್ಲೇಜ್ ಕಲ್ಲನ್ನು ಎತ್ತಿ ಹಾಕಿ ಕೊಲೆ ಮಾಡಿದ್ದಾಗಿ ತಿಳಿಸಿದ್ದರಿಂದ ನಿನ್ನನ್ನು ವಶಕ್ಕೆ ಪಡೆದು ಮಧ್ಯಾಹ್ನ 2 ಗಂಟೆಗೆ ಫ್ರಾಸಾ.13-ಜಾನ್ಸನ್ ಡಿಸೋಜ ರವರ ಮುಂದೆ ನಿನ್ನನ್ನು ಹಾಜರುಪಡಿಸಿ, ನಿಪಿ.28 ರಂತೆ ವರದಿಯನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-86 ಫ್ರಾ.ಸಾ.17-ಪ್ರಮೋದ್, ಆಗಿನ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯ ಮುಖ್ಯ ಪೇದೆ ತಮ್ಮ ಸಾಕ್ಷ್ಯದಲ್ಲಿ ದಿಃ 09.05.2024 ರಂದು ಅವರನ್ನು ರಾತ್ರಿ ಪಾಳಿಯ ಕರ್ತವ್ಯದಲ್ಲಿದ್ದಾಗ ದಿಃ 10-05-2024 ರಂದು ಬೆಳಗಿನ ಜಾವ ಸುಮಾರು 2.30 ಗಂಟೆಗೆ ಅವರ ಠಾಣೆಯ ದೂರವಾಣಿಗೆ ಯಾರೋ ಸಾರ್ವಜನಿಕರು ಕರೆ ಮಾಡಿ ಚಿಕ್ಕಮಗಳೂರು ನಗರ ಐ.ಜಿ. ರಸ್ತೆಯ ಸುಪ್ರೀಂ ಮೆಡಿಕಲ್ ಹತ್ತಿರ ಫುಟಪಾತ್ ರಸ್ತೆಯಲ್ಲಿ ಕೊಲೆ ನಡೆದಿರುವ ಬಗ್ಗೆ ಮಾಹಿತಿ ನೀಡಿದ ಮೇರೆಗೆ ಅವರು ಕೂಡಲೇ ರಾತ್ರಿ ಗಸ್ತು ಸಿಬ್ಬಂದಿಗಳ ತಪಾಸಣೆ ಕರ್ತವ್ಯಕ್ಕೆ ಹೋಗಿದ್ದ ಚಾಸಾ.21-ಎಂ.ಜೆ.ಧರ್ಮೇಗೌಡರವರಿಗೆ ವೈರ್ಲೆಸ್‌ಮುಖಾಂತರ ಮಾಹಿತಿ ನೀಡಿ, ಸ್ಥಳಕ್ಕೆ ಹೋಗುವಂತೆ ಕೇಳಿಕೊಂಡು, ಅವರೂ ಸಹ ಕೂಡಲೇ ಮಾಹಿತಿ ಬಂದ ಸ್ಥಳಕ್ಕೆ ಹೋಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-87 ಫ್ರಾ.ಸಾ.17 ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರು ಅಲ್ಲಿಗೆ ಹೋಗುವಷ್ಟರಲ್ಲಿ ಚಾಸಾ.21 ರವರು ಅಲ್ಲಿಗೆ ಬಂದಿದ್ದಾಗಿ, ಅಲ್ಲಿ ಸಾರ್ವಜನಿಕರು ನೆರೆದಿದ್ದಾಗಿ, ಫುಟಪಾತ್ ರಸ್ತೆಯಲ್ಲಿ ರಕ್ತದ ಕಲೆಗಳಿರುವುದು ಹಾಗೂ ಒಬ್ಬ ಹೆಂಗಸಿನ ಮೃತ ದೇಹ ಇರುವುದು ಕಂಡುಬಂದಿದ್ದಾಗಿ, ಅಲ್ಲಿದ್ದ ಸಾರ್ವಜನಿಕರನ್ನು ವಿಚಾರಿಸಿದಾಗ ಅವರು, ಸದರಿ ಫುಟ್ಪಾತಿನ ಮೇಲೆ ಮಲಗಿದ್ದ ಒಬ್ಬ ಬಿಕ್ಷುಕಿಯ ತಲೆಯ ಮೇಲೆ ಪೂರ್ಣೇಶ್ ಎಂಬಾತ ಕಲ್ಲನ್ನು ಎತ್ತಿ ಹಾಕಿ ಕೊಲೆ ಮಾಡಿದ್ದಾಗಿ ತಿಳಿಸಿದ ಮೇರೆಗೆ ಸಾರ್ವಜನಿಕರು ಸದರಿ ಪೂರ್ಣೇಶನನ್ನು ಹಿಡಿಯಲು ಹೋದಾಗ ಆತ ತಪ್ಪಿಸಿಕೊಂಡು ಹೋಗಿದ್ದಾಗಿ ಅವರು ತಿಳಿಸಿದ್ದಾಗಿ, ಚಾಸಾ.21 ರವರಿಗೆ ಸದರಿ ಪೂರ್ಣೇಶನ ಮುಖ ಪರಿಚಯ ಇದ್ದ ಕಾರಣ ಅವರು ಮತ್ತು ಚಾಸಾ.21 ಆತನನ್ನು ಪತ್ತೆ ಮಾಡಲು ಆತನನ್ನು ಹುಡುಕಿ ನೋಡಿದ್ದು, ಆತ ಅವರಿಗೆ ಸಿಗಲಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-88 ಫ್ರಾ.ಸಾ.17 ತಮ್ಮ ಸಾಕ್ಷದಲ್ಲಿ ಮುಂದುವರಿದು ನಂತರ ಘಟನೆಯ ಬಗ್ಗೆ ಫ್ರಾಸಾ.10-ಶಂಭುಲಿಂಗನಗೌಡ, ಪಿ.ಎಸ್.ಐ ರವರಿಗೆ ಮೌಖಿಕವಾಗಿ ಮಾಹಿತಿ ತಿಳಿಸಿದ್ದಾಗಿ, ನಂತರ ಅಂಭ್ಯುಲೆನ್ಸ್ ನಲ್ಲಿ ಮೃತ ದೇಹವನ್ನು ಮುಂದಿನ ಕ್ರಮಕ್ಕಾಗಿ ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಸಲ್ಲಿಸಿದ್ದಾಗಿ, ಸದರಿ ಆಸ್ಪತ್ರೆಯ ವೈದ್ಯಾಧಿಕಾರಿಗೆ ಶವವನ್ನು ಶವಾಗಾರದಲ್ಲಿರಿಸಲು ನಿಪಿ.35 ರಂತೆ ಅನುಮತಿ ಕೋರಿ ಮನವಿ ಸಲ್ಲಿಸಿದ್ದಾಗಿ, ನಂತರ ಠಾಣೆಗೆ ಹಿಂದಿರುಗಿ ಬೆಳಗ್ಗೆ 9 ಗಂಟೆಯವರೆಗೆ ಠಾಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದಾಗಿ ಹಾಗೂ ನಿಪಿ.3 ಮತ್ತು ನಿಪಿ.4 ರ ಪೋಟೋದಲ್ಲಿರುವ ಶವವನ್ನು ಅವರು ನೋಡಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-89 ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ ಚಿಕ್ಕಮಗಳೂರು ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ ಜೆ ಎಂ ನ್ಯಾಯಾಲಯದ ಕ್ರಿ..ಮಿಸ್.307/2023 ರ ಆದೇಶ ಪುಟಗಳ ದೃಢೀಕೃತ ಪ್ರತಿಗಳು, ದಿನಾಂಕಃ 4/1/2024 ರ ನಿಮಾನ್ಸ್ ಅಸ್ಪತ್ರೆಯಿಂದ ಸದರಿ ನ್ಯಾಯಾಧೀಶರಿಗೆ ಕಳುಹಿಸಲಾದ ಪತ್ರದ ದೃಢೀಕೃತ ಪ್ರತಿ, ದಿನಾಂಕಃ 18/12/2024 ರ ವಕೀಲರ ಸಂಘದ ಪತ್ರದ ದೃಢೀಕೃತ ಪ್ರತಿ, ದಿನಾಂಕಃ 8/5/2024 ರ ದೂರಿನ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸುತ್ತಿದ್ದೇನೆ.

ಪ್ರಶ್ನೆ-90 ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ?

ಉತ್ತರಃ ಮಾಡಿಸುತ್ತೇನೆ

(ಮೇಲಿನ ಪ್ರಶ್ನೆಗಳನು ಆರೋಪಿತನಿಗೆ ಕೇಳಿ ಆತನು ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ)

ದಿನಾಂಕಃ 12.02.2026

ಸಹಿ/-

(ಭಾನುಮತಿ ಬಿ.ಸಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿಕ್ಕಮಗಳೂರು.